

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 Issue : 38 Thursday 16-10-2025 E-mail : maruti.b.hosamani76@gmail.com Page: 4 Price : Rs. 1/-


## "ಸಿನಿಮಾ ಹಿಟ್ಟಾದರೂ, ನಂಬಿಕೆಗೆ ಧಕ್ಕೆಯಾಗಿದೆ" ರಿಷಬ್ ಶೆಟ್ಟಿಯವರ ವಿರುದ್ಧ–ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ..!

**ಸಿಹಿ ಕಹಿ ಸುದ್ದಿ,**

**ಬೆಂಗಳೂರು/ಮಂಗಳೂರು :** 'ಕಾಂತಾರಾ ಚಾಪ್ಟರ್ 1' ಮೂಲಕ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ನಟ ಹಾಗೂ ನಿರ್ದೇಶಕ ರಿಷಬ್ ಶೆಟ್ಟಿ ಅವರ ಬಹುನಿರೀಕ್ಷಿತ 'ಕಾಂತಾರಾ ಚಾಪ್ಟರ್ 1' (ಕಥಾಂತರ) ಚಿತ್ರವು ಇದೀಗ ರಾಜ್ಯಮಟ್ಟದ ಗಂಭೀರ ವಿವಾದಕ್ಕೆ ಕಾರಣವಾಗಿದೆ. ಈ ಸಿನಿಮಾವು ಮೂಢನಂಬಿಕೆ ಮತ್ತು ವಿಜ್ಞಾನ, ಸಂಸ್ಕೃತಿ ಮತ್ತು ಮಾರ್ಕೆಟಿಂಗ್ ನಡುವಿನ ಸೈದ್ಧಾಂತಿಕ ಚರ್ಚೆಯನ್ನು ಹುಟ್ಟುಹಾಕಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರದ ವಿರುದ್ಧ ತೀವ್ರ ವಿರೋಧದ ಅಲೆ ಎದ್ದಿದೆ.

**ಸಾರ್ವಜನಿಕ ಆಕ್ಷೇಪಣೆಗಳ ಸ್ಫೋಟಕ ಸಂಗತಿಗಳು:–**

ವಿವಾದದವಿಷಯಸಾರ್ವಜನಿಕರ ಆತಂಕ ಮತ್ತು ಕಟು ಟೀಕೆಗಳು

ವಿಜ್ಞಾನಕ್ಕೆ ಕುತ್ತು, ಅಜ್ಞಾನಕ್ಕೆ ಜೈ! ಬೇರೆ ದೇಶದವರು ತಂತ್ರಜ್ಞಾನ (ಟೆಕ್ನಾಲಜಿ) ಮತ್ತು ವೈಜ್ಞಾನಿಕ ವಿಷಯಗಳ ಬಗ್ಗೆ ಸಿನಿಮಾ ಮಾಡುವಾಗ, ಕನ್ನಡದ ಪ್ರಮುಖ ನಿರ್ದೇಶಕರೊಬ್ಬರು ದೆವ್ವ, ಭೂತ ಮತ್ತು ಮೌಢ್ಯಗಳ ಮೇಲೆ ಚಿತ್ರ ಮಾಡಿ ಜನರ ತಲೆಗೆ ಮೂಢ ನಂಬಿಕೆ ತುಂಬುತ್ತಿದ್ದಾರೆ ಎಂಬ ಗಂಭೀರ ಆರೋಪವಿದೆ.

ದೈವಗಳ 'ಮಾರ್ಕೆಟಿಂಗ್' ?? ಆರೋಪ ಸಿನಿಮಾದ ಮಾರ್ಕೆಟ್ಟಿಂಗನ್ನು ಹೆಚ್ಚಿಸಿಕೊಳ್ಳಲು, 'ಕಾಂತಾರಾ ಚಾಪ್ಟರ್ 1' ರ ಯಶಸ್ಸನ್ನು ಮುಂದುವರೆಸಲು 'ದೈವ' ದ ಪರಿಕಲ್ಪನೆಯನ್ನು ಉಪಯೋಗಿಸಿ ಕೊಳ್ಳಲಾಗಿದೆ. ಇದರಿಂದ ತುಳುನಾಡಿನ ಭಾವನಾತ್ಮಕ ನಂಬಿಕೆಗಳು ಕೇವಲ ಪ್ರಚಾರದ ವಸ್ತುವಾದವು ಎಂದು ವಿರೋಧ ವ್ಯಕ್ತವಾಗಿದೆ.

ತುಳುನಾಡ ದೈವಕ್ಕೆ ಅಪಚಾರ ಮತ್ತು ಅವಮಾನ! ದೈವ ಪಾತ್ರಗಳನ್ನು ಸೃಷ್ಟಿಸಿ, ಎಲ್ಲೆಂದರಲ್ಲಿ ಕುಳಿತು ಕುಪ್ಪಳಿಸುವುದನ್ನು ಚಿತ್ರಿಸುವುದು, ದೈವಗಳ ನೈಜ ಆರಾಧನೆಗೆ ಮಾಡಿದ ಅಪಚಾರವಾಗಿದೆ. ಇದರಿಂದ ತುಳುನಾಡು ದೈವ ದೇವರುಗಳ ಮರ್ಯಾದೆ ಸಾರ್ವಜನಿಕ ವಲಯದಲ್ಲಿ ಹೋಗಿದೆ ಎಂದು ತುಳುನಾಡಿಗರು ನೋವು ವ್ಯಕ್ತಪಡಿಸಿದ್ದಾರೆ.

ಭಾವನಾತ್ಮಕ ಸಂಬಂಧಕ್ಕೆ ಅತಿದೊಡ್ಡ ಧಕ್ಕೆ ??

ತುಳುನಾಡಿನ ದೈವ ದೇವರುಗಳು ಆ ಭಾಗದ ಜನರೊಂದಿಗೆ ಭಾವನಾತ್ಮಕ ಮತ್ತು ಆಳವಾದ ಸಾಂಸ್ಕೃತಿಕ ಸಂಬಂಧ ಹೊಂದಿವೆ. ಸಿನಿಮಾ ಹೆಸರಿನಲ್ಲಿ ಇಂತಹ ಪವಿತ್ರ ನಂಬಿಕೆಗಳನ್ನು ವಿರೂಪಗೊಳಿಸುವುದು ಒಂದು ಬೇಸರದ ವಿಚಾರವಾಗಿದೆ ಎಂದು ಅಭಿಮಾನಿಗಳು ಹೇಳಿದ್ದಾರೆ.

ರಿಷಬ್ ಶೆಟ್ಟಿಗೆ ಅಭಿಮಾನ ಇಲ್ಲವೆ? ನಟ ರಿಷಬ್ ಶೆಟ್ಟಿ ಅವರಿಗೆ ತುಳುನಾಡಿನ ದೈವ ಮತ್ತು ಸಂಸ್ಕೃತಿಯ ಬಗ್ಗೆ ನಿಜವಾದ ಅಭಿಮಾನ ಇಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ವಿವಾದಾತ್ಮಕ ಅಭಿಪ್ರಾಯಗಳು ಕೇಳಿಬಂದಿದ್ದು, ಇದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶದ ಮಹಾಪೂರ..!

ಈ ವಿವಾದದ ಹಿನ್ನೆಲೆಯಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ 'ಕಾಂತಾರಾ ಛಿಛಿಠಿ–ಣಜಡಿ 1' ವಿರುದ್ಧ ಹಲವು ಹ್ಯಾಶ್ಟ್ಯಾಗ್ಗಳು ಟ್ರೆಂಡ್ ಆಗಿವೆ. ದೈವದ ಆರಾಧನೆಯು ಕೇವಲ ಮನರಂಜನೆಯ ವಿಷಯವಲ್ಲ, ಅದನ್ನುಅತಿರೇಕಕ್ಕೆಒಯ್ದುಮೂಲ ಪಾವಿತ್ರ್ಯತೆಗೆ ಧಕ್ಕೆ ತರಲಾಗುತ್ತಿದೆ ಎಂಬುದು ವಿರೋಧಿಗಳ ಪ್ರಮುಖ ವಾದವಾಗಿದೆ.

ಸಂಕ್ಷಿಪ್ತವಾಗಿ, ಈ ಸಿನಿಮಾವು ರಾಜ್ಯದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವಾದದ ಕೇಂದ್ರಬಿಂದುವಾಗಿದ್ದು, ಸಾರ್ವಜನಿಕರು ಚಿತ್ರದ ವಿರುದ್ಧ ವಿರೋಧ ವ್ಯಕ್ತಪಡಿಸುತ್ತಿರುವ ರೀತಿ, ಚಿತ್ರತಂಡಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಈ ಬಗ್ಗೆ ಚಿತ್ರತಂಡ ಶೀಘ್ರವೇ ಸ್ಪಷ್ಟನೆ ನೀಡುವ ಅಗತ್ಯವಿದೆ ಎಂಬುದು ರಾಜ್ಯದ ಪ್ರಜ್ಞಾವಂತ ಸಮಾಜದ ಆಗ್ರಹವಾಗಿದೆ.

**ವರದಿ:ಆರತಿ.ಗಿಳಿಯಾರು. ಉಡುಪಿ**

## ಬೆಟ್ಟದೂರು ಗ್ರಾಮದಲ್ಲಿ ಗಣಿಗಾರಿಕೆ ವಿರುದ್ಧ – ಗ್ರಾಮಸ್ಥರಿಂದ ತೀವ್ರ ಪ್ರತಿಭಟನೆ

**ಸಿಹಿ ಕಹಿ ಸುದ್ದಿ,**

**ಬೆಟ್ಟದೂರು :** ಮಾನ್ವಿ ತಾಲೂಕಿನ ಬೆಟ್ಟದೂರು ಗ್ರಾಮದ ಪಕ್ಕದಲ್ಲಿರುವ ಎಂ/ಎಸ್. ಸುಚಿತ್ ಮಿಲೇನಿಯಮ್ ಪ್ರೈ.ಲಿ ಕಂಪನಿಯು ನಡೆಸುತ್ತಿರುವ ಕಲ್ಲಿನಗಣಿಗಾರಿಕೆಯಬ್ಲಾಸ್ಟಿಂಗ್ನಿಂದಾಗಿ ಗ್ರಾಮಸ್ಥರ ಮನೆಗಳು ಬಿರುಕು ಬಿಟ್ಟಿದ್ದು, ಶಿಥಿಲಗೊಂಡಿವೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಇಂದು ಕಂಪನಿ ಮುಂಭಾಗದಲ್ಲಿ ಧರಣಿ ನಡೆಸಿ ಗಣಿಗಾರಿಕೆ ಮತ್ತು ಬ್ಲಾಸ್ಟಿಂಗ್ ಚಟುವಟಿಕೆ ತಕ್ಷಣ ನಿಲ್ಲಿಸುವಂತೆ ಆಗ್ರಹಿಸಿದರು.



ಗ್ರಾಮದ ಪ್ರತಿನಿಧಿಗಳು ಮಾತನಾಡುತ್ತಾ "ಸುಚಿತ್ ಮಿಲೇನಿಯಮ್ ಪ್ರೈ.ಲಿ ಕಂಪನಿಯು ಬೆಟ್ಟದೂರುಗ್ರಾಮದಿಂದಕೇವಲ400 ರಿಂದ 500 ಮೀಟರ್ ದೂರದಲ್ಲೇ ಕಲ್ಲಿನ ಗಣಿಗಾರಿಕೆ ನಡೆಸುತ್ತಿದೆ. ಕಳೆದ ಒಂದು ವರ್ಷ ಆರು ತಿಂಗಳಿಂದ ಪ್ರತಿ ದಿನ ನಡೆಯುತ್ತಿರುವ ಬ್ಲಾಸ್ಟಿಂಗ್ನ ಪರಿಣಾಮವಾಗಿ ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ, ವೃದ್ಧರು ಮತ್ತು ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ರಾತ್ರಿ ವೇಳೆ ಬ್ಲಾಸ್ಟಿಂಗ್ನಿಂದ ಉಂಟಾಗುವ ಭಾರೀ ಶಬ್ದದಿಂದ ನಿದ್ರೆ ತಪ್ಪುತ್ತಿದೆ. ಹಲವಾರು ಬಾರಿ ಇಲಾಖೆಗೆ ದೂರು ನೀಡಿದ್ದರೂ ಯಾವುದೇ ಕ್ರಮ ಜರುಗಿಸಿಲ್ಲ," ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮಸ್ಥರು ಮುಂದುವರಿದು ಹೇಳಿದರು "ಈ ಗಣಿಗಾರಿಕೆ ನೀರಮಾನ್ವಿ ಸೀಮಾಂತರದಲ್ಲಿರುವುದರಿಂದ ಪರವಾನಿಗೆ ಆ ಗ್ರಾಮ ಹೆಸರಲ್ಲಿ ನೀಡಲಾಗಿದೆ, ಆದರೆ ಬೆಟ್ಟದೂರು ಗ್ರಾಮವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ನೀರಮಾನ್ವಿ 1 ರಿಂದ 1.5 ಕಿಲೋಮೀಟರ್ ದೂರದಲ್ಲಿದೆ, ಆದರೂ ಬೆಟ್ಟದೂರು ಕೇವಲ 400?500 ಮೀಟರ್ ಅಂತರದಲ್ಲಿರುವುದರಿಂದ ನೇರ ಪರಿಣಾಮ ಎದುರಿಸುತ್ತಿದೆ.

ಗಣಿಗಾರಿಕೆಯಲ್ಲಿ ಅತಿಯಾಗಿ ಸಿಡಿಮದ್ದು ಬಳಕೆ ಮಾಡುವುದರಿಂದ ಗ್ರಾಮ ಕಂಪಿಸುತ್ತಿದ್ದು, ಬೆಟ್ಟದಲ್ಲಿರುವ ಭಾರಿ ಕಲ್ಲುಗಳು ಉರುಳುವ ಭೀತಿ ಇದೆ. ಕಂಪನಿಯ ವಾಹನಗಳು ನಿರಂತರವಾಗಿ ಓಡಾಡುವುದರಿಂದ ರಸ್ತೆಯ ಪಕ್ಕದ ಬೆಳೆಗಳುದೂಳಿನಿಂದಆವೃತವಾಗಿವೆ,ರೈತರ ಬೆಳೆಗಳು ಅರ್ಧದಷ್ಟು ಹಾನಿಗೊಳಗಾಗಿವೆ. ವಿದ್ಯಾರ್ಥಿಗಳು ಮತ್ತು ರೈತರಿಗೆ ವಾಹನ ಸಂಚಾರದಿಂದ ತುಂಬಾ ತೊಂದರೆ ಉಂಟಾಗಿದೆ."

ಇದಲ್ಲದೆ, ಸ್ಫೋಟದಿಂದ ಬರುವ ಅನಿಲ ಮತ್ತು ದೂಳಿನ ಕಾರಣದಿಂದ ಊರಿನ ಜನರಲ್ಲಿ ಉಸಿರಾಟ ಮತ್ತು ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ಗ್ರಾಮಸ್ಥರು ಹೇಳಿದರು. "ಕಳೆದ 5 ತಿಂಗಳಿಂದ ಕಂಪನಿಗೆ ಪರಿಹಾರ ಕೇಳುತ್ತಿದ್ದೇವೆ, ಆದರೆ ಯಾವುದೇ ರೀತಿಯ ನಷ್ಟ ಪರಿಹಾರ ಹಣ ನೀಡಿಲ್ಲ. ಈ ಗಣಿಗಾರಿಕೆಯಿಂದ ಹಾನಿಗೊಳಗಾದ ಮನೆಗಳು ಮತ್ತು ಜಮೀನುಗಳಿಗೆ ತಕ್ಷಣ ಪರಿಹಾರ ನೀಡಬೇಕು. ಜೀವಹಾನಿ ಸಂಭವಿಸಿದರೆ ಸರ್ಕಾರ ಮತ್ತು ಕಂಪನಿ ನೇರವಾಗಿ ಹೊಣೆಗಾರರಾಗ ಬೇಕು," ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಕೊನೆಯಲ್ಲಿ ಗ್ರಾಮಸ್ಥರು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡು "ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕಂಪನಿಯ ವಿರುದ್ಧ ತುರ್ತು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕಾನೂನಾತ್ಮಕ ಹೋರಾಟ ನಡೆಸಲು ನಾವು ಸಿದ್ಧರಾಗಿದ್ದೇವೆ," ಎಂದು ತಿಳಿಸಿದರು.

ಧರಣಿಯಲ್ಲಿ ಬೆಟ್ಟದೂರು ಗ್ರಾಮದ ಸಾರ್ವಜನಿಕರು, ಮಹಿಳೆಯರು, ಹಿರಿಯರು, ಯುವಕರು, ರೈತರು ಹಾಗೂ ಶಾಲಾ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಎಸ್.ಸಿ. ಎಸ್.ಟಿ. ಹಾಗೂ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಆದ್ಯತೆ: ತಿಮ್ಮಾಪೂರ



**ಮುಧೋಳ :** ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಅಲೆಮಾರಿ ಜನಾಂಗ ಹಾಗೂ ಕಡು ಬಡವರ ಅಭಿವೃದ್ಧಿಗೆ ಕಾಂಗ್ರೆಸ ಸರಕಾರ ಬದ್ಧವಾಗಿದ್ದು ವಿವಿಧ ಯೋಜನೆಗಳನ್ನು ಅವರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನಗರ ಹಾಗೂ ಲೋಕಾಪೂರದ ಕಾಲೋನಿಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲೆಮಾರಿ ನಿಗಮದ ರಾಜ್ಯಾಧ್ಯಕ್ಷೆ ಪಲ್ಲವಿ ಜಿ. ಅವರ ಜೊತೆ ಭೇಟಿ ನೀಡಿ ಮಾತನಾಡಿದ ಅವರು, ಎಲ್ಲ ನಿಗಮಗಳಿಂದ ಎಲ್ಲ ಸಮುದಾಯದ ಜನರಿಗೆ ಯೋಜನೆಗಳನ್ನು ತಲುಪಿಸಲುಪ್ರಯತ್ನಿಸಲಾಗುವುದೆಂದುತಿಮ್ಮಾಪೂರ ವಿವರಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಅಲೆಮಾರಿ ಜನಾಂಗ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು ಮಾತನಾಡಿ ಸಾಮಾಜಿಕ ಅಭಿವೃದ್ಧಿ, ಶಿಕ್ಷಣ, ಉದ್ಯೋಗಾವಕಾಶಗಳ ಕುರಿತು ಮಾತನಾಡಿದರು.

ಕಾಂಗ್ರೆಸ ಅಧ್ಯಕ್ಷರಾದ ಸದುಗೌಡ ಪಾಟೀಲ,ಅಶೋಕ ಕಿವಡಿ, ಪರಮಾನಂದ ಕುಟರಟ್ಟಿ,

ಉದಯ ಸಾರವಾಡ ಸಂಜಯ ತಳೇವಾಡ, ಹಣಮಂತ ತಿಮ್ಮಾಪೂರ, ಚಿನ್ನು ಅಂಬಿ, ತಹಶೀಲದಾರ ಪ್ರಕಾಶ ಗಾಯಕವಾಡ, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಎಚ್. ಎಂ. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

## ಸೂಕ್ತ ಬೆಳೆ ವಿಮೆ ವಿತರಣೆಗೆ ರೈತರ ಆಗ್ರಹ



**ಇಳಕಲ್ :** ಇಳಕಲ್ಲ ತಾಲೂಕಿನಲ್ಲಿ ಅತಿವೃಷ್ಟಿ ಯಿಂದಾಗಿ ರೈತರ ಜಮೀನುಗಳನ್ನು ಗುಂಟೆಗಳ ಲೆಕ್ಕದಲ್ಲಿ ನಷ್ಟವಾಗಿದೆ ಎಂದು ನಮೂದಿಸಿ ಪರಿಹಾರದ ಹಣ ಅಂದಾಜು 1000, 1700 ಈ ರೀತಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹಾಕುತ್ತಿದ್ದು ಅದನ್ನು ವಿರೋಧಿಸಿ ಇಳಕಲ್ ತಹಶೀಲ್ದಾರ ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ ರೈತರ ಹಕ್ಕುಒತ್ತಾಯ ಪತ್ರವನ್ನು ತಹಶಿಲ್ದಾರ ಅಮರೇಶ ಪಮ್ಮಾರ ಅವರಿಗೆ ಮನವಿ ಕೊಡಲಾಯಿತು. ನಮ್ಮ ತಾಲೂಕಿನಲ್ಲಿ 80ರಷ್ಟು ರೈತರ ಜಮೀನುಗಳು 60 ಕ್ಕಿಂತ ಹೆಚ್ಚಿಗೆ ನಷ್ಟವಾಗಿದ್ದು

ಸರಿಯಾಗಿ ಸಮೀಕ್ಷೆ ಮಾಡಿ ನ್ಯಾಯಯುತವಾದ ಹಣವನ್ನು ರೈತರ ಖಾತೆಗಳಿಗೆ ಶೀಘ್ರವೇ ಜಮಾ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರಾದ ಬಸನಗೌಡ ಪಾಟೀಲ,ಗುರು ಗಾಣಿಗೇರ, ಶರಣಗೌಡ ಕಂದಕೂರ,ತೋಟಪ್ಪ ತೋಪಲಕಟ್ಟಿ ಸೇರಿದಂತೆ ಅನೇಕ ರೈತರು ಆಗ್ರಹಿಸಿದ್ದಾರೆ.

## ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ, ಕೊಲೆ ಖಂಡಿಸಿ – ಎಂ.ಬಿ.ವಿ.ಪಿ ಯಿಂದ ಬೃಹತ್ ಪ್ರತಿಭಟನೆ

**ಸಿಹಿ ಕಹಿ ಸುದ್ದಿ,**

**ಬನೋಸಿ:**ವಿಜಯಪುರಜಿಲ್ಲೆಯಮುದ್ದೇಬಿಹಾಳ ತಾಲೂಕಿನ ವಿದ್ಯಾರ್ಥಿನಿಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಖಂಡಿಸಿ ಮುದ್ದೇಬಿಹಾಳ ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಬೃಹತ್ ಪ್ರತಿಭಟನೆ ಮಾಡಲಾಯಿತು.



ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ವಿದ್ಯಾರ್ಥಿನಿ ಸಾವಿಗೆ ನ್ಯಾಯ ಸಿಗಬೇಕು ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಲೇಬೇಕು ಎಂದು ಘೋಷಣೆ ಕೂಗುತ್ತಾ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು, ಈ ಸಂದರ್ಭದಲ್ಲಿ ಎಬಿವಿಪಿಯ ರಾಜ್ಯ ಕಾರ್ಯದರ್ಶಿ ಸಚಿನ ಕುಳಗೇರಿ ಮಾತನಾಡಿ ವಿದ್ಯಾರ್ಥಿನಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಸೂಕ್ತ ಆರೋಪಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವಂತೆ ತನಿಖೆಯನ್ನು ಮಾಡಬೇಕು ಯಾವುದೇ ಕಾರಣಕ್ಕೂ ತಪ್ಪಿತಸ್ಥ ಆರೋಪಿಗಳು ತಪ್ಪಿಸಿ ಕೊಳ್ಳದಂತೆ ಪೊಲೀಸ್ ಇಲಾಖೆ ಜಾಗೃತಿ ವಹಿಸಬೇಕು ಪದೇ ಪದೇ ಇಂತಹ ಪ್ರಕರಣಗಳು ನಡೆಯುತ್ತಿದ್ದು ಮಾನವ ಪ್ರಜ್ಞಾವಂತ ಸಮಾಜ ತಲೆ ತಗ್ಗಿಸುವಂತೆ ಆಗಿದೆ ಎಂದರು.

ಎಬಿವಿಪಿಯ ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಹಾಗೂ ಎಬಿವಿಪಿಯ ಮುಖಂಡ ಶಿವನಗೌಡ ಬಿರಾದಾರ ಮಾತನಾಡಿ ಸಮಾಜದಲ್ಲಿ ಇಂತಹ ಘಟನೆಗಳು ನಡೆಯ ಬಾರದು, ಸರ್ಕಾರದ ವ್ಯವಸ್ಥೆಗಳು ಇಂತಹ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳಿಗೆ ಗಲ್ಲು ಶಿಕ್ಷೆ ಅಂತ ಕಠಿಣ ಕ್ರಮವನ್ನು ಕೈಗೊಂಡಾಗ ಮಾತ್ರ ಇಂತಹ ಘಟನೆಗಳು ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ ಅಂತಹ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರಮುಖರಾದ ರವೀಂದ್ರ ಬಿರಾದಾರ, ನಗರ ಕಾರ್ಯದರ್ಶಿ ಮಲ್ಲಮ್ಮ ಪಾಟೀಲ, ಭೂಮಿಕಾ ಕತ್ತಿ, ನಿಖಿಲ ಮಲಗಲ್ದಿನ್ನಿ, ರಮೇಶ ಹೂಗಾರ, ಪಲ್ಲವಿ ದೊಡ್ಡಮನಿ, ಸಹನಾ ವಡವಡಗಿ, ಪ್ರಸನ್ನ ತಾಳಿಕೋಟೆ, ಸಚಿನ ಜಾಧವ, ಮಹೇಶ ಬಾವೂರ, ಕೃಷ್ಣಾ ಮೂರ್ತಿ ಹಾಗೂ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ.ಮುದ್ದೇಬಿಹಾಳ**

### ಹದಿನೆಂಟು ವರ್ಷಗಳ ನಂತರ ಒಂದಾದ ಸ್ನೇಹಿತರು

## ಭಾರತೀಯ ಗುರು–ಶಿಷ್ಯ ಪರಂಪರೆ ಶ್ರೇಷ್ಠವಾದುದು

**ಬಾಗಲಕೋಟೆ :** ಭಾರತೀಯ ಗುರು–ಶಿಷ್ಯ ಪರಂಪರೆ ಶ್ರೇಷ್ಠವಾದುದು. ಜಗತ್ತಿನ ಪ್ರತಿಯೊಬ್ಬಶ್ರೇಷ್ಠವ್ಯಕ್ತಿಯಹಿಂದೆಗುರುಗಳೇ ಮೂಲ ಶಕ್ತಿಯಾಗಿರುತ್ತಾರೆ. ಕೆಲವರ ಜೀವನದಲ್ಲಿ ಅರಿವೇ ಗುರುವಾಗುತ್ತದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ಆರ್.ಎಚ್. ಬಟಕುರ್ಕಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.




ನಗರದ ಕಂಠಿ ಸಭಾ ಭವನದಲ್ಲಿ ನಡೆದ ಹೇಮ–ವೇಮ ಸಂಸ್ಥೆಯ ಸ್ವಾಮಿ ವಿವೇಕಾನಂದ ಪ್ರೌಢ ಶಾಲೆಯ ಸನ್ 2007–08ನೇ ಸಾಲಿನ ಎಸ್‌ಎಸ್–ಎಲ್ಸಿ ವಿದ್ಯಾರ್ಥಿಗಳ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹಳೆ ವಿದ್ಯಾರ್ಥಿಗಳು ಹದಿನೆಂಟು ವರ್ಷಗಳ ಬಳಿಕ ಒಂದುಗೂಡಿ, ತಮ್ಮ ಹಳೆಯ ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಆಯೋಜಿಸಿದ ಕಾರ್ಯಕ್ರಮವನ್ನು ಸಸಿಗೆ ನೀರುಣ್ಣಿಸುವ ಮೂಲಕ ಉದ್ಘಾಟಿಸಲಾಯಿತು. 'ಗೋ ಗ್ರೀನ್' ತತ್ವವನ್ನು ಅಳವಡಿಸಿಕೊಂಡು ಪರಿಸರ ಸಂರಕ್ಷಣೆಯ ಸಂದೇಶವನ್ನು ಸಾರಲಾಯಿತು. ಗುರುಗಳಿಗೆ ಗೌರವ ಸೂಚಕವಾಗಿ ಸಸಿಗಳನ್ನು ಉಡುಗೊರೆಯಾಗಿ ನೀಡುವುದು ಈ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು.

ಕಾರ್ಯಕ್ರಮದಲ್ಲಿ ಶಾಲೆಯ ನಿವೃತ್ತ ಶಿಕ್ಷಕ ಮಾನಪ್ಪ ನಂದಿ ಅವರು ಮಾತನಾಡಿ, "ಆ ದಿನಗಳಲ್ಲಿ ವಿದ್ಯಾರ್ಥಿಗಳು ಬಿಳಿ ಬಣ್ಣದ ಉಡುಪಿನಲ್ಲಿ ಶಾಲಾ ಆವರಣದಲ್ಲಿ ಕಾಣಿಸಿದಾಗ, ಶಾಂತಿಯ ಸಂಕೇತವಾದ ಪಾರಿವಾಳಗಳಂತೆ ತೋರುತ್ತಿದ್ದರು. ಆ ಕ್ಷಣಗಳು ಇನ್ನೂ ಮನದಲ್ಲಿ ಹಸಿರುವಾಸಿಯಾಗಿದೆ" ಎಂದು ಸಂತಸ ವ್ಯಕ್ತಪಡಿಸಿದರು.

ಇನ್ನೋರ್ವ ಶಿಕ್ಷಕರಾದ ಅಶೋಕ ನಾವಲಗಿ ಹಾಗೂ ಮಹಾಂತೇಶ ನಿಡಗುಂದಿ ಜಂಟಿಯಾಗಿ ಮಾತನಾಡಿ, ತಮ್ಮ ಶಾಲಾ ದಿನಗಳನ್ನು ನೆನೆದು, ನಾವು ಸಹ ಇದೇ ಶಾಲೆಯ ವಿದ್ಯಾರ್ಥಿಗಳು. ಇಂದಿನ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ನಮಗೆ ಗೌರವದ ವಿಷಯವಾಗಿದೆ. ನಮಗೆ ಕಲಿಸಿದ ಗುರುಗಳಾದ ಮಾನಪ್ಪ ನಂದಿ, ಆರ್.ಎಚ್. ಬಟಕುರ್ಕಿ ಹಾಗೂ ಸೈರಾಬಾನು ಧನ್ನೂರ ಅವರಿಗೆ ಕೃತಜ್ಞತೆಯನ್ನು ನಾವು ಕೂಡಾ ಸಲ್ಲಿಸುತ್ತೇವೆ ಎಂದು ಹೇಳಿದರು.

ಇಂಗ್ಲೀಷ ಶಿಕ್ಷಕರಾದ ಸಿಕಂದರ ಅಥಣಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಗುರುಗಳು ಯಾವಾಗಲೂ ಶಿಷ್ಯರ ಒಳಿತನ್ನೇ ಬಯಸುತ್ತಾರೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಭವಿಷ್ಯದಲ್ಲಿ ಉತ್ತಮ ಶಿಕ್ಷಣ ನೀಡಿ ಸಮಾಜಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಆರ್.ಎಚ್. ಬಟಕುರ್ಕಿ, ಮಾನಪ್ಪ ನಂದಿ, ರಾಜೇಶ್ವರಿ ಪವಾರ, ಸೈರಾಬಾನು ಧನ್ನೂರ, ಟಿ. ನರಸಿಂಹರೆಡ್ಡಿ, ಮಹಾಂತೇಶ ನಿಡಗುಂದಿ, ಜಗನ್ನಾಥ ಹೊಸೂರ, ಸಿಂಕಂದರ ಅಥಣಿ, ಅಶೋಕ ನಾವಲಗಿ, ಅರುಣ ಶಂಭೋಜಿ, ರಾಜು ಯಾದವ, ಮುರಳೀಧರ ಮಹೇಂದ್ರಕರ ಅವರನ್ನು ಸನ್ಮಾನಿಸುವ ಮೂಲಕ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಶಂತಸಿಂಗ ರಾಜಪೂತ, ಶರತ ಪವಾರ, ಶೃತಿ ಗೋಡಿ, ತ್ರಿವೇಣಿ ಪಟ್ಟಣಶೆಟ್ಟಿ, ಭಾಗ್ಯ ಜಾಧವ, ಮಹಮ್ಮದಗೌಸ ಗದ್ದನಕೇರಿ, ರಾಹುಲ್ ಚವ್ಹಾಣ, ಸಚಿನ್ ದಾದನಟ್ಟಿ, ಸಂಜಯ ಸಕ್ರಿ, ವಿಕ್ರಮ್ ಶಿರೂರ, ರಮೇಶ್ ಬಯ್ಯಾಪುರ, ಬಸವರಾಜ ಮಲಘಾಣ, ಚೇತನ್ ನಾಗರಾಳ ಅವರುಗಳು ಉಸ್ತುವಾರಿ ವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸನ್ 2007–08ನೇ ಸಾಲಿನ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಉತ್ಸಾಹದಿಂದ ಪಾಲ್ಗೊಂಡು ಹಳೆಯ ನೆನಪುಗಳನ್ನು ಹಂಚಿಕೊಂಡರು.

ಗುರು–ಶಿಷ್ಯ ಬಾಂಧವ್ಯವನ್ನು ಮತ್ತೊಮ್ಮೆ ಜೀವಂತಗೊಳಿಸಿದ ಈಸಮ್ಮಿಲನಭಾವನಾತ್ಮಕವಾತಾವರಣದಲ್ಲಿ ನೆರವೇರಿತು.

# ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವ



**ಚಿಮ್ಮಡ :** ಗ್ರಾಮದ ಆರಾಧ್ಯ ದೇವತೆ ದ್ಯಾಮವ್ವ ದೇವಿಯ ಜಾತ್ರಾ ಮಹೋತ್ಸವದ ನಿಮಿತ್ಯ ಅಲಂಕೃತ ದೇವಿಯ ಉಡಿ ತುಂಬುವ ಕಾರ್ಯಕ್ರಮ ವಿಜ್ರಂಭಣೆಯಿಂದ ನಡೆಯಿತು.

ಸ್ಥಳಿಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಹಾಗೂ ಓಂಕಾರ ಮಹಾರಾಜರ ನೇತೃತ್ವದಲ್ಲಿ ಮುಂಜಾನೆವಿಶೇಷಪೂಜೆಯೊಂದಿಗೆ ಆರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ನೂರಾರು ಜನ ಮಹಿಳೆಯರಿಂದ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಮಧ್ಯಾಹ್ನ ಭಕ್ತಾದಿಗಳಿಗೆ ಮಹಾಪ್ರಸಾದ ವಿತರಣೆ ನಡೆಯಿತು. ಇದೇ ಸಂದರ್ಭದಲ್ಲಿ ಪ್ರಭು ಮಹಾಸ್ವಾಮಿಗಳುಹಾಗೂಓಂಕಾರಮಹಾರಾಜರನ್ನು ಗ್ರಾಮದ ಪ್ರಮುಖರು ಹಾಗೂ ವಿಶ್ವಕರ್ಮ ಸಮಾಜ ಬಾಂಧವರಿಂದ ಸತ್ಕರಿಸಿ ಗೌರವಿಸಲಾಯಿತು.

ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾಹಳಿಂಗಳಿ,ಅಣ್ಣಪ್ಪಗೌಡಪಾಟೀಲ,ರಾಚಯ್ಯ ಮಠಪತಿ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಪರಪ್ಪಾ ಪಾಲಭಾಂವಿ, ಪ್ರಭು ನೇಸೂರ, ಈಶ್ವರ ಬಡಿಗೇರ, ಪ್ರಕಾಶ ಪೂಜಾರಿ, ಪ್ರಕಾಶ ಬಡಿಗೇರ, ಕಾಳು ಬಡಿಗೇರ ಸೇರಿದಂತೆ ಹಲವಾರು ಜನ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವಿಠ್ಠಲ ರುಕ್ಮಿಣಿ ಜಾತ್ರಾ ಮಹೋತ್ಸವದ ಪ್ರಚಾರ ಸಾಮಗ್ರಿ ಬಿಡುಗಡೆ

**ಮಹಾಲಿಂಗಪುರ :** ನವ್ಹೆಂಬರ್ 1 ರಿಂದ 6 ರವರೆಗೆ ನಡೆಯಲಿರುವ ಪಟ್ಟಣದ ಬುದ್ನಿ ಪಿ.ಡಿ. ಬಡಾವಣೆಯ ಏಳು ನೂರು ವರ್ಷಗಳ ಐತಿಹಾಸಿಕ ವಿಠ್ಠಲ ರುಕ್ಮಿಣಿ ಅಖಂಡ ಹರಿನಾಮ ಸಪ್ತಾಹ ಜಾತ್ರಾ ಮಹೋತ್ಸವದ ಪ್ರಚಾರ ಸಾಮಗ್ರಿಗಳನ್ನು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಬಿಡುಗಡೆಗೊಳಿಸಿದರು.

ದೇವಸ್ಥಾನದ ಹಿರಿಯರಾದ ಕೃಷ್ಣಗೌಡ ಪಾಟೀಲ ಮಾತನಾಡಿ, ಪ್ರತಿ ವರ್ಷದಂತೆ ನವ್ಹೆಂಬರ 1 ರಿಂದ 6 ವರೆಗೆ ವಿಠ್ಠಲ-ರುಕ್ಮಿಣಿ ದೇವಸ್ಥಾನದಲ್ಲಿ ಪಂಢರಪುರದ ಕೃಷ್ಣಾಮಹಾರಾಜರು ಮತ್ತುಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಭಜನೆ, ಕೀರ್ತನೆ, ಜಾಗರಣೆ, ಮಹಾಪ್ರಸಾದ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ನವ್ಹೆಂಬರ 4 ರಂದು ಸಂಜೆ 7 ಕ್ಕೆ ಲಕ್ಷ ದೀಪೋತ್ಸವ ಜರುಗಲಿದೆ.

5 ರಂದು ಗೌರಿ ಹುಣ್ಣಿಮೆಯ ಮುಂಜಾನೆ 8 ಕ್ಕೆ ಶ್ರೀಹರಿ ವಿಠ್ಠಲನ ಸೋಹಳಾ ದಿಂಡಿ ನಗರ ಪ್ರದಕ್ಷಣೆ ನಡೆಯಲಿದೆ. ಮಧ್ಯಾಹ್ನ 12 ಕ್ಕೆ ಮಹಾ ಪ್ರಸಾದ, ಸಂಜೆ 6 ಕ್ಕೆ ಮಹಾ ರಥೋತ್ಸವ, ರಾತ್ರಿ 11 ಕ್ಕೆ ಗೋಪಾಳಕಾಲಾ ಶ್ರೀಕೃಷ್ಣ ಬಾಲ ಲೀಲಾಮೃತ ಕೀರ್ತನೆ ಜರುಗಲಿದೆ. ನವ್ಹೆಂಬರ 6 ರಂದು ಸಂಜೆ 5 ಕ್ಕೆ ಕಳಸ ಇಳಿಸಲಾಗುವುದೆಂದರು.

ಮಲ್ಲಪ್ಪ ಅಂಬನ್ನಗೋಳ,ಗೌಡಪ್ಪಗೌಡ ಪಾಟೀಲ,ಸದಾಶಿವ ಶೇಗುಣಶಿ,ನಾರಾಯಣಗೌಡ ಪಾಟೀಲ,ಭೀಮಪ್ಪನಾಯಕ, ವಿಠ್ಠಲಗೌಡ ಎಂ. ಪಾಟೀಲ, ರಾಜು ಮುದಕಪ್ಪಗೋಳ, ರಾಮಣ್ಣ ಬದ್ನಿಕಾಯಿ, ಸಿದ್ದಯ್ಯಾ ಮಠಪತಿ, ವಿಠ್ಠಲಗೌಡ ಬಿ. ಪಾಟೀಲ, ವಿಷ್ಣು ನಾಯಕ, ಶ್ರೀನಿವಾಸ ಮಾಲಬಸರಿ, ಕುಮಾರ ಪವಾರ, ಮಲ್ಲಿಕಾರ್ಜುನ ಸಂಶಿ, ಮಹಾಲಿಂಗ ಬಿ. ಪಾಟೀಲ, ಶ್ರೀಮಂತ ಒಂಟಗೋಡಿ, ಬೇಬವ್ವ ಯಾದವಾಡ, ಶಿವಯ್ಯ ಮಠಪತಿ, ಮೌನೇಶ ದಾದನಟ್ಟಿ, ಹಣಮಂತ ಬಡಿಗೇರ ಸೇರಿದಂತೆ ಹಲವರು ಭಾಗವಹಿಸಿದ್ದರು.

# ರಕ್ತದಾನ ಶಿಬಿರಕ್ಕೆ ಅರುಣ ಕಾರಜೋಳ ಚಾಲನೆ



**ಮುಧೋಳ :** ನಗರದ ಹೌಸಿಂಗ್ ಕಾಲೋನಿಯ ಬಿ. ಜೆ. ಪಿ. ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿಯ ನಗರ ಹಾಗೂ ಗ್ರಾಮೀಣ ಮಂಡಲ ಮತ್ತು ವೀರಭದ್ರೇಶ್ವರ ರಕ್ತ ಕೇಂದ್ರದ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರಕ್ಕೆ ಪಕ್ಷದ ಮುಖಂಡ ಅರುಣ ಗೋವಿಂದ ಕಾರಜೋಳ ಚಾಲನೆ ನೀಡಿ ಮಾತನಾಡಿದ ಅವರು, ಸೇವಾ ಪಾಕ್ಷಿಕ ಕಾರ್ಯಕ್ರಮ ಹಾಗೂ ಪ್ರಧಾನಿ ನರೇಂದ್ರ ಮೋದೀಜಿ ಅವರ ಹುಟ್ಟು ಹಬ್ಬದ ನಿಮಿತ್ಯವಾಗಿ ಈ ಶಿಬಿರದಲ್ಲಿ ಸ್ವಯಂ ಪ್ರೇರಣೆಯಿಂದ ಹಲವಾರು ಯುವಕರು ರಕ್ತದಾನ ಮಾಡಲು ಉತ್ಸಾಹದಿಂದ ಆಗಮಿಸಿದ್ದು ಸಂತಸದ ವಿಷಯ.

ಈ ಕುರಿತು ಇಂದಿನ ಯುವಕರಿಗೆ ರಕ್ತದಾನ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮುಖಂಡರಾದ ಸಂಗಣ್ಣ ಕಾತರಕಿ, ಕೆ. ಎಸ್. ಹಿರೇಮಠ, ಕೆ. ಆರ್. ಮಾಚಪ್ಪನವರ, ಡಾ. ರವಿ ನಂದಗಾಂವ, ಶ್ರೀಶೈಲ ಚಿನ್ನಣ್ಣವರ, ನಗರಸಭೆ ಸದಸ್ಯರಾದ ಗುರುಪಾದ ಕುಳಲಿ, ಮಂಜು ಮಾನೆ, ಸುನಿಲ ನಿಂಬಾಳಕರ, ಪ್ರದೀಪ್ ನಿಂಬಾಳಕರ, ಅನೂಪ್ ಚವ್ಹಾಣ, ಮಹಮ್ಮದ್ ಶೇಖ ಇತರರು ಉಪಸ್ಥಿತರಿದ್ದರು.

ರಕ್ತದಾನಿಗಳು : ನಗರಸಭೆ ಮಾಜಿ ಅಧ್ಯಕ್ಷ ಗುರುಪಾದ ಕುಳಲಿ, ಸದಸ್ಯ ಕುಮಾರ ಪಮ್ಮರ, ಪ್ರವೀಣ್ ಶಿಂಧೆ ಸೇರಿದಂತೆ ಹಲವಾರು ಜನ ರಕ್ತದಾನ ನೀಡಲು ಮುಂದಾಗಿದ್ದರು.

# ಶಿಕ್ಷಣ ಅರ್ಧಕ್ಕೆ ಮೊಟಕು: ನನಗೆ ನೋವಿದೆ–ಶಾಸಕ ಮೇಟಿ

## ಹುಟ್ಟೂರಲ್ಲಿ ತಾಯಿ ಹೆಸರಿನಲ್ಲಿ 2 ಎಕರೆ ಭೂದಾನ | ಕ್ಷೇತ್ರ–ಹುಟ್ಟೂರು ಮಾದರಿ ಮಾಡುವ ಗುರಿ

**ಬಾಗಲಕೋಟೆ :** ಸರ್ಕಾರಿ ನೌಕರಿ ಸಿಗುತ್ತದೆ ಎಂದು ಶಿಕ್ಷಣ ಕಲಿಯಬಾರದು. ಬದುಕಿಗಾಗಿ ಶಿಕ್ಷಣ ಕಲಿಯಬೇಕು. ನಾನು 8ನೇ ತರಗತಿಗೇ ಶಿಕ್ಷಣ ಕಲಿಯುವುದನ್ನು ಬಿಟ್ಟೆ. ನಾನೂ ಪದವಿ ಶಿಕ್ಷಣ ವರೆಗೆ ಕಲಿಯಲಿಲ್ಲ ಎಂಬ ಕೊರಗಿದೆ. ಹೀಗಾಗಿ ನಮ್ಮೂರಿನ ಯಾವ ಮಕ್ಕಳೂ ಶಿಕ್ಷಣದಿಂದ ವಂಚಿತ ಆಗಬಾರದು ಎಂಬ ಉದ್ದೇಶದಿಂದ ಸರ್ಕಾರಿ ಪ್ರೌಢ ಶಾಲೆ ಆರಂಭಿಸಲಾಗಿದೆ. ಎಲ್ಲರೂ ಇದರ ಪ್ರಯೋಜನೆ ಪಡೆಯಬೇಕು ಎಂದು ಬಿಟಿಡಿಎ ಅಧ್ಯಕ್ಷರೂ ಆದ ಶಾಸಕ ಎಚ್.ವೈ. ಮೇಟಿ ಹೇಳಿದರು.

ತಾಲೂಕಿನ ತಿಮ್ಮಾಪುರದಲ್ಲಿ ಸಿಎಸ್ಆರ್ (ಮೂರು ವರ್ಷ ಶಾಸಕರ ಸ್ವಂತ ಹಣದಲ್ಲಿ ನಿರ್ವಹಣೆಯಡಿ) ಯೋಜನೆಯಡಿ ಸರ್ಕಾರಿ ನೂತನ ಪ್ರೌಢ ಶಾಲೆ ಉದ್ಘಾಟಿಸಿ ಅವರು ಮಾತನಾಡಿದರು.

**3 ವರ್ಷದಿಂದ ಪ್ರಯತ್ನ :** ತಿಮ್ಮಾಪುರಕ್ಕೆ ಹಿರಿಯ ಪ್ರಾಥಮಿಕ ಶಾಲೆ ಮಾತ್ರ ಇತ್ತು. ಇಲ್ಲಿನ ಮಕ್ಕಳು, ಪ್ರೌಢ ಶಾಲೆಗಾಗಿ ಬೋಡನಾಯಕನದಿನ್ನಿಅಥವಾರಾಂಪುರಕ್ಕೆ ಹೋಗಬೇಕಾಗಿತ್ತು. ಇಲ್ಲಿಯೇ ಪ್ರೌಢ ಶಿಕ್ಷಣ ದೊರೆಯಲಿ ಎಂಬ ಉದ್ದೇಶದಿಂದ ಮೂರು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೆ. ಈ ವರ್ಷ ಸರ್ಕಾರ ಅನುಮೋದನೆ ನೀಡಿದೆ. ನಮ್ಮೂರಿನ ಪ್ರತಿಯೊಬ್ಬ ಮಕ್ಕಳೂ ಪ್ರೌಢ ಶಾಲೆಗೆ ಸೇರಬೇಕು. ಯಾರೇ ಶಾಲೆ ಬಿಟ್ಟಿದ್ದರೂ ಪುನಃ ಶಾಲೆಗೆ ಸೇರಿಸಬೇಕು ಎಂದು ಪಾಲಕರಿಗೆ ತಿಳಿಸಿದರು.

**ಎಷ್ಟೇ ಖರ್ಚು ಬಂದರೂ ನೋಡಿಕೊಳ್ಳುವೆ :** ಈ ಶಾಲೆಯನ್ನು ಮೂರು ವರ್ಷ ನಾನೇ ಸ್ವಂತ ಖರ್ಚಿನಲ್ಲಿ ನೋಡಿಕೊಳ್ಳಬೇಕು. ಸಿಎಸ್ಆರ್ಯೋಜನೆಯಡಿ ಮಂಜೂರಾತಿ ನೀಡಿದ್ದು, ಮೂರು ವರ್ಷ ಯಶಸ್ವಿಯಾಗಿ ನಡೆಸಿ, ಆ ಬಳಿಕ ಸರ್ಕಾರಕ್ಕೆ ಹಸ್ತಾಂತರಿಸಲಾಗುವುದು. ಪ್ರೌಢ ಶಾಲೆ ನಿರ್ವಹಣೆ, ಶಿಕ್ಷಕರ ವೇತನ ಸಹಿತ ಶಾಲೆ ಮುನ್ನಡೆಯಲು ಎಷ್ಟೇ ಖರ್ಚು ಬಂದರೂ ನೋಡಿಕೊಳ್ಳುವೆ. ಈ ಶಾಲೆ ಮಾತ್ರ, ಇಡೀ ತಾಲೂಕಿಗೆ ಮಾದರಿಯಾಗಬೇಕು ಎಂದು ಆಶಿಸಿದರು.



**ತಾಯಿಯ ಹೆಸರಿನಲ್ಲಿ 2 ಎಕರೆ ಭೂದಾನ :** ತಿಮ್ಮಾಪುರಗ್ರಾಮಕ್ಕೆಬಿಸಿಎಂ ವಸತಿ ನಿಲಯ ಬೇಡಿಕೆ ಇದೆ. ಅದಕ್ಕೂ ಈ ಬಾರಿ ಗಂಭೀರ ಪ್ರಯತ್ನ ಮಾಡುವೆ. ಜಾಗದ ಕೊರತೆ ಎದುರಾಗುತ್ತಿದ್ದು, ಗ್ರಾಮಸ್ಥರು ಭೂಮಿ ನೀಡಲು ಸಹಕಾರ ನೀಡಬೇಕು. ಸರ್ಕಾರಿ ಪ್ರೌಢ ಶಾಲೆಗೆ ಶಾಶ್ವತ ಕಟ್ಟಡ, ಆಟದ ಮೈದಾನ, ಎಲ್ಲ ರೀತಿಯ ಮೂಲಭೂತ ಸೌಲಭ್ಯ ಕಲ್ಪಿಸಲು ಜಾಗದ ಕೊರತೆ ಇದೆ. ಹೀಗಾಗಿ ನನ್ನ ತಾಯಿ ಹೊಳೆಯವ್ವ ಮೇಟಿ ಹೆಸರಿನಲ್ಲಿ 2 ಎಕರೆ ಭೂಮಿ ದಾನವಾಗಿ ನೀಡುತ್ತೇನೆ ಎಂದು ವಾಗ್ದಾನ ನೀಡಿದರು.

**ಶಕ್ತಿಯಾಗಿ ಬೆಳೆಯಲು ಹುಟ್ಟೂರಿನ ಬೆಂಬಲ :** ನಾನು ಹೆಚ್ಚುಶಾಲೆ ಕಲಿತಿಲ್ಲ. ಆದರೂ, 10 ಬಾರಿ ಚುನಾವಣೆ ಎದುರಿಸಿದ್ದೇನೆ. ಎರಡು ಬಾರಿ ಸಚಿವನಾಗಿ, 5 ಬಾರಿ ಶಾಸಕನಾಗಿ, 1 ಬಾರಿ ಸಂಸದನಾಗಿದ್ದೇನೆ. ನಾನು ರಾಜಕೀಯದಲ್ಲಿ ಇಷ್ಟೆಲ್ಲ ಬೆಳೆಯಲು ಹುಟ್ಟೂರಿನ ಜನರ ಸಹಾಯ, ಸಹಕಾರ, ಬೆಂಬಲ ಬಹಳಷ್ಟಿದೆ. ನನ್ನೂರಿನ ಅಭಿಮಾನ, ಹೆಮ್ಮೆ ನನಗೂ ಇದೆ. ಹುಟ್ಟಿದ ಊರಿನ ಬಗ್ಗೆ ಅಭಿಮಾನ, ಕಾಳಜಿ ಪ್ರತಿಯೊಬ್ಬರಿಗೂ ಇರಬೇಕು. ಇದನ್ನೇ ನನ್ನ ಮಕ್ಕಳು, ಮೊಕ್ಕಳಿಗೂ ನಾನು ಹೇಳಿದ್ದೇನೆ ಎಂದರು.

**ಸಂಸದನಾದಾಗ ನೋವು ಅನುಭವಿಸಿದೆ :** ನಾನು ಸಚಿವನಾಗಿದ್ದ ವೇಳೆಯೇ ಲೋಕಸಭೆ ಚುನಾವಣೆಗೆ ನಿಲ್ಲಲು ದೇವೇಗೌಡರು ಒತ್ತಾಯಿಸಿದ್ದರು.

ನನಗೆ ಹಿಂದಿ–ಇಂಗ್ಲೀಷ ಭಾಷೆ ಬರಲ್ಲ. ಬೇಡ ಎಂದು ಕೇಳಿಕೊಂಡಿದ್ದೆ.

ಆದರೂ, ಒತ್ತಾಯ ಮಾಡಿ ಚುನಾವಣೆಗೆ ನಿಲ್ಲಿಸಿದರು. ಗೆದ್ದು ದಿಲ್ಲಿಗೆ ಹೋದಾಗ, ಭಾಷೆಯ ಸಮಸ್ಯೆ ಎದುರಿಸಿದೆ. ಆಗ ನಾನೂ ಹೆಚ್ಚು ಶಾಲೆ ಕಲಿಯಬೇಕಿತ್ತು ಎಂಬ ನೋವು ಆಯಿತು. ಇಂತಹ ನೋವು, ಈಗಿನ ಯಾವ ಮಕ್ಕಳಿಗೂ ಆಗಬಾರದು. ಸ್ಥಳೀಯವಾಗಿ ಪ್ರಾಥಮಿಕ, ಪ್ರೌಢ ಶಿಕ್ಷಣ, ಹತ್ತಿರದ ರಾಂಪುರದಲ್ಲಿ ಪದವಿಪೂರ್ವ, ಪದವಿ ಶಿಕ್ಷಣ ನೀಡಲು ಕಾಲೇಜು ಎಲ್ಲವೂ ಸ್ಥಾಪಿಸಲಾಗಿದೆ. ಗ್ರಾಮದ ಕೆರೆಯ ಸಮಗ್ರ ಅಭಿವೃದ್ಧಿಗೂ ಯೋಜನೆ ರೂಪಿಸುತ್ತಿದ್ದು, ನಮ್ಮೂರು ಹಾಗೂ ಬಾಗಲಕೋಟೆ ಕ್ಷೇತ್ರವನ್ನುಮಾದರಿಮಾಡಲುಪ್ರಯತ್ನಿಸುವೆ ಎಂದು ಹೇಳಿದರು.

> **1962ರಲ್ಲಿ ನಮ್ಮ ತಂದೆ ಯಮನಪ್ಪ ಅವರು, ಆಗಿನ ಕಾಲದಲ್ಲಿ 1501 ರೂ. ದೇಣಿಗೆನೀಡಿ,ಸರ್ಕಾರಿಕಿರಿಯಪ್ರಾಥಮಿಕ ಶಾಲೆಯ ಕೊಠಡಿ ಕಟ್ಟಿಸಿದ್ದರು. ಅದೇ ಶಾಲೆಯಲ್ಲಿ ನಾನೂ 4ನೇ ತರಗತಿ ವರೆಗೆ ಕಲಿತೆ. ಇಂದು ಅದೇ ಶಾಲಯನ್ನು ಪ್ರೌಢ ಶಾಲೆಯನ್ನು ಉನ್ನತ್ತೀಕರಿಸಿದ್ದು, ಮೂರು ವರ್ಷ ಸ್ವಂತ ಹಣದಲ್ಲಿ ನಿರ್ವಹಣೆ ಮಾಡುತ್ತೇನೆ. ತಿಮ್ಮಾಪುರಕ್ಕೆ ಬಿಸಿಎಂ ವಸತಿ ನಿಲಯ ತರಲು ಪ್ರಯತ್ನಿಸುವೆ.**
>
> **। ಎಚ್.ವೈ. ಮೇಟಿ**
> **ಶಾಸಕರು, ಬಾಗಲಕೋಟೆ**

ಗ್ರಾ.ಪಂ. ಅಧ್ಯಕ್ಷ ರಮೇಶ ಕೊಳ್ಹಾರ, ಜಿ.ಪಂ. ಮಾಜಿ ಅಧ್ಯಕ್ಷರಾದ ಬಾಯಕ್ಕ ಮೇಟಿ, ಬಸವಂತಪ್ಪ ಮೇಟಿ, ಪಿಕೆಪಿಎಸ್ಅಧ್ಯಕ್ಷ ಮುತ್ತಪ್ಪ ಹುಗ್ಗಿ, ಶಾಲಾ ಶಿಕ್ಷಣ ಇಲಾಖೆಯ ಉಪ ಇರ್ದೇಶಕ ಅಜೀತ ಮನ್ನಿಕೇರಿ, ಬಿಇಒ ಎಂ.ಎಸ್. ಬಡದಾನಿ, ಗ್ರಾ.ಪಂ. ಉಪಾಧ್ಯಕ್ಷೆ ಯಲ್ಲವ್ವ ಪರಶುರಾಮ ಮಸಬಿನಾಳ, ಪಿಡಿಒ ಅರ್ಚನಾ ಕುಲಕರ್ಣಿ, ಪ್ರಮುಖರಾದ ಉಮೇಶ ಮೇಟಿ, ಎಚ್. ಕೆ. ಗುಡೂರ, ಎಸ್.ಜಿ. ಮಿರ್ಜಿ, ವೈ.ವೈ. ತಿಮ್ಮಾಪುರ, ಧರ್ಮೇಶ ತುಂಬುರಮಟ್ಟಿ, ನಾಗರಾಜ ದೇಶಪಾಂಡೆ, ಹಸನಡೋಂಗ್ರಿ ಮೇಟಗುಡ್ಡ, ಎಚ್.ಎಂ. ಪಾಟೀಲ, ಪ್ರಕಾಶ ಕೋಟಿ, ಜಿ.ಜಿ. ಮಾಗನೂರ, ಪಿ.ಎಸ್. ಚವ್ಹಾಣ, ಎಸ್.ಎಸ್. ಬೆಣ್ಣೂರ, ಪ್ರಶಾಂತ ಸವದಿ, ಮುಂತಾದವರು ಪಾಲ್ಗೊಂಡಿದ್ದರು.

# ರಾಣಿ ದುರ್ಗಾವತಿ: ಆಧುನಿಕ ಮಹಿಳೆಯರ ಗೆಲುವಿಗೆ ದಾರಿ ತೋರಿಸಿದ ರಾಣಿ

ಶತಮಾನಗಳ ಹಿಂದೆ ಯುವ ರಾಣಿಯೊಬ್ಬರು ಶರಣಾಗುವ ಬದಲು ಗೌರವ, ಧೈರ್ಯ ಮತ್ತು ಕರ್ತವ್ಯವನ್ನು ಆಯ್ಕೆ ಮಾಡಿಕೊಂಡು ಮುಂಚೂಣಿಗೆ ಬಂದರು, ಆಗ ಭಾರತದ ಸಚಿವಾಲಯಗಳು, ನೀತಿಗಳು ಮತ್ತು ಪ್ರಮುಖ ಕಾರ್ಯಕ್ರಮಗಳ ಕಲ್ಪನೆ ಇರಲಿಲ್ಲ. ಮಧ್ಯ ಭಾರತದಾದ್ಯಂತ ಯೋಧ–ರಾಣಿ ಮತ್ತು ಶೌರ್ಯದ ಮಾದರಿಯಾಗಿ ರಾಣಿ ದುರ್ಗಾವತಿಯನ್ನುಸ್ಮರಿಸಲಾಗುತ್ತಿದೆ.ಸಾರ್ವಜನಿಕಜೀವನ, ವ್ಯವಹಾರ, ವಿಜ್ಞಾನ ಮತ್ತು ನಾಗರಿಕ ವ್ಯವಹಾರಗಳನ್ನು ಪುನರ್ ರೂಪಿಸಿದ ಅಂತಹ ಮಹಿಳೆಯರನ್ನು,ರಾಷ್ಟ್ರ ಇನ್ನೂ ನೆನಪುಮಾಡಿಕೊಳ್ಳುತ್ತಿದೆ.ಅವರ501ನೇಜಯಂತಿಯಂದು, 16 ನೇ ಶತಮಾನದ ಯುದ್ಧಭೂಮಿಗಳಿಂದ ಆಧುನಿಕ ಭಾರತವನ್ನು ರೂಪಿಸುವ ನೀತಿಗಳವರೆಗೆ ಅವರ ಜೀವಂತ ಕಥೆ ಮತ್ತು ಅವುಗಳನ್ನು ಸಾಕಾರಗೊಳಿಸುವ ಮೌಲ್ಯಗಳನ್ನು ನಾವು ಸದಾ ನೆನಪಿಸಿಕೊಳ್ಳುತ್ತೇವೆ.

**ಧೈರ್ಯವನ್ನುಸೂಚಿಸುವ ಭಾವಚಿತ್ರ**

ರಾಣಿ ದುರ್ಗಾವತಿ ಅವರ ಜೀವನವು ದಂತಕಥೆಯಾಯಿತು, ಏಕೆಂದರೆ ಅವರು ಇತಿಹಾಸದಲ್ಲಿ ಸಾಮಾನ್ಯವ್ಯಕ್ತಿಯಾಗಿ ಗುರುತಿಸಿಕೊಳ್ಳಲು ನಿರಾಕರಿಸಿದರು. ಆಕ್ರಮಣಕಾರಿ ಶಕ್ತಿಗಳನ್ನು ಎದುರಿಸಿದ ಅವರು ತಮ್ಮ ಕ್ಷೇತ್ರ ಮತ್ತು ಜನರನ್ನು ರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಸದಾ ಮುಂದೆ ನಿಲ್ಲುವ, ನಿರ್ಣಾಯಕ ನಿರ್ಧಾರಗಳನ್ನು ಕೈಗೊಳ್ಳುವ ಮತ್ತು ತ್ಯಾಗ ಗೈಯ್ದ ಮಹಿಳೆಯ ಆ ಚಿತ್ರಣ – ಅವರನ್ನು ಪ್ರಾದೇಶಿಕ ಆಳ್ವಿಕೆಗಾರರಿಂದ ರಾಷ್ಟ್ರೀಯ ಹೆಗ್ಗುರುತಾಗಿ ಪರಿವರ್ತಿಸಿತು. ಇಂದು, ಇಂದೋರ್‌ನಂತಹ ನಗರಗಳಲ್ಲಿ ಮತ್ತು ಮಧ್ಯ ಭಾರತದಾದ್ಯಂತ ಪ್ರದೇಶದಲ್ಲಿನ ಕಥೆಗಳಲ್ಲಿ, ಸ್ಮಾರಕಗಳು ಅಥವಾ ಸ್ಥಳೀಯ ಸಂಸ್ಕೃತಿಯಲ್ಲಿ ಅವರನ್ನು ಸ್ಮರಿಸಲಾಗುತ್ತಿದ್ದು, ಅದು ನಾಯಕತ್ವವು ಲಿಂಗಕ್ಕೆ ಸೀಮಿತವಾಗಿಲ್ಲ ಎಂಬುದಕ್ಕೆ ಅವರನ್ನು ಸಾಕ್ಷ್ಯವನ್ನಾಗಿ ಉಲ್ಲೇಖಿಸಲಾಗುತ್ತಿದೆ.

ಸಂಕೇತದಿಂದ ನೀತಿಯವರೆಗೆ: ಭಾರತವು ಕರೆಗೆ ಹೇಗೆ ಸ್ಪಂದಿಸುತ್ತದೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಅದರ ಸಂಬಂಧಿತ ಇಲಾಖೆಗಳು ಆಧುನಿಕ ಭಾರತದ ಮಹಿಳಾ ಕಲ್ಯಾಣ ಮತ್ತು ಸಬಲೀಕರಣಕ್ಕಾಗಿ ರಾಣಿ ದುರ್ಗಾವತಿ ಪ್ರತಿನಿಧಿಸಿದ ಸಂಸ್ಥೆ ಮತ್ತು ಸಾರ್ವಜನಿಕ ಉದ್ದೇಶದ ಸಂಯೋಜನೆಯಿಂದ ಸ್ಫೂರ್ತಿ ಪಡೆದಿದೆ. ರಾಣಿ ತನ್ನ ಕಾಲದಲ್ಲಿ ಪ್ರದೇಶ ಮತ್ತು ಜನರನ್ನು ರಕ್ಷಿಸಿದ್ದರಂತೆ, ಇಂದು ಸರ್ಕಾರವು ಹಲವು ವಲಯಗಳಲ್ಲಿ ಮಹಿಳೆಯರ ಹಕ್ಕುಗಳು, ಲಭ್ಯತೆ ಮತ್ತು ಅವಕಾಶಗಳನ್ನು ರಕ್ಷಿಸಲು ಮತ್ತು ವಿಸ್ತರಿಸುವ ಗುರಿಯನ್ನು ಹೊಂದಿದೆ.

ಶಿಕ್ಷಣ ಮತ್ತು ಸಾಮಾಜಿಕ ಸಮಾನತೆ: ಬಾಲಕಿಯರ ಶಿಕ್ಷಣವನ್ನು ಸುಧಾರಿಸಲು ಮತ್ತು ಲಿಂಗಾನುಪಾತವನ್ನು ತಗ್ಗಿಸಲು ರೂಪಿಸಲಾದ ಕಾರ್ಯಕ್ರಮಗಳು ಶಾಲಾ ಶಿಕ್ಷಣ, ಆತ್ಮವಿಶ್ವಾಸ ಮತ್ತು ಆಕಾಂಕ್ಷೆ ಬೆಳೆಯುವ ಸ್ಥಳದಲ್ಲಿ ನಾಯಕತ್ವವು ಬೆಳೆಯುವುದರಿಂದ ಸಂಸ್ಥೆಯ ದೀರ್ಘಕಾಲೀನ ಅಡಿಪಾಯವನ್ನು ಹಾಕುತ್ತದೆ.

ಆರ್ಥಿಕ ಸಬಲೀಕರಣ ಮತ್ತು ಉದ್ಯಮಶೀಲತೆ: ಕೌಶಲ್ಯ–ನಿರ್ಮಾಣ ಉಪಕ್ರಮಗಳಿಂದ ಸಾಲ ಮತ್ತು ಮಾರುಕಟ್ಟೆ ಒದಗಿಸುವವರೆಗೆ, ಈ ಕ್ರಮಗಳು ಮಹಿಳೆಯರು ವಾಣಿಜ್ಯ ಮತ್ತು ಆಡಳಿತ ಮತ್ತು ನಿರ್ಧಾರ ಕೈಗೊಳ್ಳುವಂತಹ ಆಧುನಿಕ ಸಮಾನ ವೃತ್ತಿಗಳಲ್ಲಿ ನಾಯಕತ್ವ ರೂಪಿಸಿಕೊಳ್ಳುವತ್ತ ಹೆಜ್ಜೆ ಹಾಕಲು ಅನುವು ಮಾಡಿಕೊಡುತ್ತದೆ.

ಸುರಕ್ಷತೆ ಮತ್ತು ಕಾನೂನು ರಕ್ಷಣೆ: ಮಹಿಳೆಯರ ದೈಹಿಕ ಸ್ವಾಯತ್ತತೆ ಮತ್ತು ನಾಗರಿಕ ಕರ್ತವ್ಯಗಳಲ್ಲಿ ಪಾಲ್ಗೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಲು ಒನ್ ಸ್ಟಾಪ್ ಸೆಂಟರ್‌ಗಳು ಮತ್ತು ಸಹಾಯವಾಣಿಗಳು ಕಾನೂನು ಚೌಕಟ್ಟುಗಳನ್ನು ಬಲಪಡಿಸಿವೆ, ಇದರಿಂದಾಗಿ ವೃತ್ತಿ ಅಥವಾ ಧ್ವನಿ ಎತ್ತಲು ಯಾವುದೇ ಭಯವಿಲ್ಲ.

ಆರೋಗ್ಯ ಮತ್ತು ಮಾತೃ ಆರೈಕೆ: ತಾಯಿಯ ಆರೋಗ್ಯ ಮತ್ತು ಪೋಷಣೆಗಾಗಿ ಯೋಜನೆಗಳು ಮಹಿಳೆಯರ ಯೋಗಕ್ಷೇಮದಲ್ಲಿ ಹೂಡಿಕೆ ಮಾಡುತ್ತವೆ, ಇದು ನಿರಂತರ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ನಾಯಕತ್ವದ ಪಾತ್ರಗಳನ್ನು ಸಕ್ರಿಯಗೊಳಿಸುತ್ತದೆ.

ತಳಮಟ್ಟದ ಆಡಳಿತ ಮತ್ತು ಪ್ರಾತಿನಿಧ್ಯ: ಪಂಚಾಯತ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ವಿಸ್ತರಿಸುವ ಪ್ರಯತ್ನಗಳು ರಾಣಿ ದುರ್ಗಾವತಿ ತನ್ನ ಕ್ಷೇತ್ರದಲ್ಲಿ ಚಲಾಯಿಸಿದ ರಾಜಕೀಯ ಸಂಸ್ಥೆಯನ್ನು ಪ್ರತಿಧ್ವನಿಸುತ್ತವೆ.

**ಜೀವನ ಮತ್ತು ಮೈಲಿಗಲ್ಲುಗಳಲ್ಲಿ ಪ್ರಗತಿಯ ಮೌಲ್ಯಮಾಪನ**

ಹೆಚ್ಚುತ್ತಿರುವ ಮಹಿಳಾ ಸಾಕ್ಷರತೆ ಮತ್ತು ಕೆಲವು ವಲಯಗಳಲ್ಲಿ ದುಡಿಯುವ ಪಡೆಯ ಪಾಲ್ಗೊಳ್ಳುವಿಕೆ, ಚುನಾಯಿತ ಹುದ್ದೆಗಳಲ್ಲಿ ಹೆಚ್ಚುತ್ತಿರುವ ಮಹಿಳೆಯರ ಸಂಖ್ಯೆ, ವೇಗವಾಗಿ ಹೆಚ್ಚುತ್ತಿರುವ ಮಹಿಳಾ ಉದ್ಯಮಶೀಲತೆ ಮತ್ತು ಸುರಕ್ಷತೆ ಮತ್ತು ಸಮಾನ ಅವಕಾಶದ ಬಗ್ಗೆ ಹೆಚ್ಚಿನ ಸಾರ್ವಜನಿಕ ಸಮಾಲೋಚನೆ ಮತ್ತಿತರ ಕ್ರಮಗಳಿಂದಾಗಿ ಕಳೆದ ಕೆಲವು ದಶಕಗಳಲ್ಲಿ ಸ್ಪಷ್ಟವಾದ ಲಾಭಗಳು ಕಂಡುಬಂದಿವೆ. ಈ ಬದಲಾವಣೆಗಳು ಕೇವಲ ಅಂಕಿ ಅಂಶಗಳಲ್ಲ; ಮಹಿಳೆಯರು ಸಜ್ಜಾದಾಗ ಮತ್ತು ಸಬಲೀಕರಣಗೊಂಡಾಗ ಅವರು ಸಮಾಜವನ್ನು ಮರುರೂಪಿಸುತ್ತಾರೆ ಎಂದು ರಾಣಿ ದುರ್ಗಾವತಿಯವರ ಜೀವನ ಕಲಿಸಿದ ಅದೇ ತತ್ವದ ಆಧುನಿಕ ಪ್ರತಿಬಿಂಬಗಳಾಗಿವೆ.

**ರಾಣಿ ದುರ್ಗಾವತಿಯ ಪರಂಪರೆಯೇ ಒಂದು ಬುನಾದಿ**

ರಾಣಿ ದುರ್ಗಾವತಿಯವರ ಮಾದರಿಯನ್ನು ವಿಶೇಷವಾಗಿ ಮೌಲ್ಯಯುತ ಗೊಳಿಸುವುದು, ನೈತಿಕ ಮತ್ತು ಪ್ರಾಯೋಗಿಕವಾದ ಅದರ ದ್ವಂದ್ವ ಗುಣಗಳಲ್ಲಿಯೇ ಇದೆ. ನೈತಿಕವಾಗಿ, ಅವರು ಘನತೆ, ಧೈರ್ಯ ಮತ್ತು ಜವಾಬ್ದಾರಿಯನ್ನು ಪ್ರತಿನಿಧಿಸುತ್ತಾರೆ. ಪ್ರಾಯೋಗಿಕವಾಗಿ, ಅವರ ಉದಾಹರಣೆಯು ಮಹಿಳೆಯರನ್ನು ನಿರ್ಧಾರ ಕೈಗೊಳ್ಳುವವರುಮತ್ತುಸಾರ್ವಜನಿಕಕಲ್ಯಾಣದರಕ್ಷಕರನ್ನಾಗಿ ಮಾಡುತ್ತದೆ. ಆ ದ್ವಂದ್ವ ಪರಂಪರೆಯು ತಲೆಮಾರುಗಳಿಂದ ಭಾರತದ ನಾಗರಿಕ ಕಲ್ಪನೆಯ ಭಾಗವಾಗಿದ್ದು, ಮಹಿಳಾ ಸಬಲೀಕರಣಕ್ಕಾಗಿ ನೀತಿಗಳು ಬೇರೂರಬಹುದಾದ ಸಾಮಾಜಿಕ ತಳಹದಿಯನ್ನು ರೂಪಿಸಲು ಸಹಾಯ ಮಾಡುತ್ತದೆ.

**'ವಿಕಸಿತ ಭಾರತ'ಕ್ಕಾಗಿ ಹೊಸ ಮಸೂರ**

ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರ ಅಂದರೆ "ವಿಕಸಿತ ಭಾರತ' ವಾಗಲು ಬಯಸುವ ದೂರದೃಷ್ಟಿಯನ್ನು ಹೊಂದಿರುವಾಗ, ಅದಕ್ಕೆ ಮಹಿಳಾ ಸಂಸ್ಥೆಗಳ ವ್ಯಾಪ್ತಿ, ಪ್ರಮಾಣ ಮತ್ತು ಸಮಾನತೆಯ ಮೂಲಕ ಅಭಿವೃದ್ಧಿಯನ್ನು ನೋಡುವ ಹೊಸ ದೂರದೃಷ್ಟಿಯ ಅಗತ್ಯವಿದೆ:. "ಮಹಿಳಾ ಕೇಂದ್ರಿತ ವಿಕಸಿತ ಭಾರತ"ಮಹಿಳೆಯರ ಪೂರ್ಣ ಭಾಗವಹಿಸುವಿಕೆಯನ್ನುಹೆಚ್ಚುವರಿ ಅಂಶವಾಗಿ ಪರಿಗಣಿಸದೆ ಕೇಂದ್ರ ಅಭಿವೃದ್ಧಿ ಸೂಚಕವಾಗಿ ಪರಿಗಣಿಸುತ್ತದೆ. ಪ್ರಾಯೋಗಿಕವಾಗಿ, ಇದರರ್ಥ ಕಲ್ಯಾಣ ಮಾನದಂಡಗಳ ಮೂಲಕಮಾತ್ರವಲ್ಲದೆಎಲ್ಲಾವಲಯಗಳಲ್ಲಿ(ಮಂಡಳಿಗಳು, ಸಾರ್ವಜನಿಕ ಸೇವೆ, ಸಮುದಾಯ ಸಂಸ್ಥೆಗಳು) ಮಹಿಳಾ ನಾಯಕತ್ವದಿಂದ ಪ್ರಗತಿಯನ್ನು ಅಳೆಯುವುದಾಗಿದೆ.

ಅಲ್ಲದೆ,ಇದುಮಹಿಳೆಯರಿಗೆಸುರಕ್ಷಿತಸಂಚಾರಮತ್ತುಆರ್ಥಿಕ ಭಾಗಿದಾರಿಕೆಯನ್ನು ಸಕ್ರಿಯಗೊಳಿಸುವ ಮೂಲಸೌಕರ್ಯ ಮತ್ತು ನಗರ ಸ್ಥಳಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ. ಮಹಿಳೆಯರು ಭವಿಷ್ಯದ ಉದ್ಯೋಗಗಳು ಮತ್ತು ತಂತ್ರಜ್ಞಾನಗಳ ತರಬೇತಿಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಜೀವನಪರ್ಯಂತ ಕಲಿಕೆ ಮತ್ತು ಮರುಕೌಶಲ್ಯದಲ್ಲಿ ಹೂಡಿಕೆ ಮಾಡುವುದು.

ಹಾಗಾಗಿ ಸಾರ್ವಜನಿಕ ಮತ್ತು ಆರ್ಥಿಕ ಸ್ಥಳಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಸಾಬೀತಪಡಿಸಲು, ಪಾವತಿಸದ ಆರೈಕೆ ಹೊರೆಗಳನ್ನು ಅಂದರೆ ಮಕ್ಕಳ ಆರೈಕೆ, ಹಿರಿಯ ಆರೈಕೆ ಮತ್ತು ಸಮುದಾಯ ಬೆಂಬಲದಂತಹ ಹೊರೆಗಳನ್ನು ತಗ್ಗಿಸುವ ನೀತಿಗಳಿಗೆ ಆದ್ಯತೆ ನೀಡುವುದರ ಮೇಲೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ.

ಈ ಆಯ್ಕೆಗಳನ್ನು ಮಾಡುವುದರಿಂದ ಪ್ರತಿಯೊಬ್ಬ ಮಹಿಳೆಯೂ ಮುನ್ನಡೆಸುವ, ರಕ್ಷಿಸುವ ಮತ್ತು ನಿರ್ಮಿಸುವ ಸಾಮರ್ಥ್ಯವನ್ನು ಹೊಂದಿದ್ದಾಳೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಮೂಲಕ.

ರಾಷ್ಟ್ರವು ರಾಣಿ ದುರ್ಗಾವತಿಯಂತಹ ನಾಯಕಿಯರ ಮನೋಭಾವವನ್ನು ಅತ್ಯಂತ ಅರ್ಥಪೂರ್ಣ ರೀತಿಯಲ್ಲಿ ಗೌರವಿಸುತ್ತದೆ.

ಹಾಗಾಗಿ ಹಿಂದಿನ ಧೈರ್ಯವನ್ನು ಭವಿಷ್ಯದ ಭರವಸೆಗೆ ಸಂಯೋಜಿಸಿದರೆ ಅದು ರಾಣಿ ದುರ್ಗಾವತಿಯ ಕಥೆಯು ಒಂದು ಅವಶೇಷವಲ್ಲ; ಭಾರತ ಏನಾಗಬಹುದು ಎಂಬುದಕ್ಕೆ ಇದು ಜೀವಂತ ದಂತಕತೆಯಾಗಿದೆ. ಅವರ ಧೈರ್ಯವು ಸಾರ್ವಜನಿಕ ಹಣೆಬರಹವನ್ನು ರೂಪಿಸುವ ಮಹಿಳೆಯರ ಹಕ್ಕಿನ ಪ್ರತಿಪಾದನೆಯಾಗಿತ್ತು. ಇಂದು ಭಾರತದ ಸಚಿವಾಲಯಗಳು, ನಾಗರಿಕ ಸಮಾಜ ಮತ್ತು ನಾಗರಿಕರು – ಶಾಲೆಗಳು ಮತ್ತು ಆಸ್ಪತ್ರೆಗಳ ಮೂಲಕ, ಕಾನೂನುಗಳು ಮತ್ತು ಜೀವನೋಪಾಯಗಳ ಮೂಲಕ, ಸುರಕ್ಷಿತ ಬೀದಿಗಳು ಮತ್ತು ಸಮಾನ ಮಂಡಳಿಗಳ ಮೂಲಕ ಆ ಪ್ರತಿಪಾದನೆಯನ್ನು ಪ್ರತಿದಿನ ಸಾಕಾರಗೊಳಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ವಿಕಸಿತ ಭಾರತದ ನಾಡಿಮಿಡಿತವನ್ನು ಅದರ ಮಹಿಳೆಯರ ಬಲದಿಂದ ಅಳೆಯುವುದಾದರೆ, ಅದು ರಾಣಿ ದುರ್ಗಾವತಿಯನ್ನು ಗೌರವಿಸುವುದು ಎಂದರೆ ಆ ಶಕ್ತಿಯನ್ನು ಸಾರ್ವತ್ರಿಕಗೊಳಿಸುವುದು ಎಂದರ್ಥವಾಗಿದೆ.

ಕೊನೆಯದಾಗಿ, ರಾಣಿಯ ಅತ್ಯುತ್ತಮ ಪರಂಪರೆ ಕಲ್ಲಿನ ಸ್ಮಾರಕವಾಗಿರಬಹುದು, ಆದರೆ ಲಕ್ಷಾಂತರ ಮಹಿಳೆಯರು ಜೀವನದ ಪ್ರತಿಯೊಂದು ವಲಯದಿಂದಲೂ ಮುನ್ನಡೆಸುವ ರಾಷ್ಟ್ರವಾಗಿದೆ– ಅದು ಮನೆ ಇರಬಹುದು, ಮಾರುಕಟ್ಟೆಗಳಲ್ಲಿರಬಹುದು, ವಿಜ್ಞಾನದಲ್ಲಿ ಮತ್ತು ಆಡಳಿತದಲ್ಲಿರಬಹುದು ? ಆ ಮೂಲಕ 21 ನೇ ಶತಮಾನಕ್ಕೆ ಧೈರ್ಯ ಮತ್ತು ನಾಯಕತ್ವದ ಸಂಪ್ರದಾಯವನ್ನು ಮುಂದೆ ಕೊಂಡೊಯ್ಯಲಾಗುತ್ತಿದೆ.

**ಸಾವಿತ್ರಿ ಠಾಕೂರ್**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಹಾಯಕ ಸಚಿವರು,**
**ಭಾರತ ಸರ್ಕಾರ**

# ಹುಲಿಗಿಯಲ್ಲಿ ಹುಣ್ಣಿಮೆ ದಿನ ಜನಸಂದಣಿ: ಅಧಿಕಾರಿಗಳಿಗೆ ಸಂಸದರ ತರಾಟೆ

**ಮುನಿರಾಬಾದ್ :** ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆಹುಣ್ಣಿಮೆಯ ಅಂಗವಾಗಿ ಮಂಗಳವಾರ ಲಕ್ಷಾಂತರ ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡಿದ್ದು, ಕಾಲ್ತುಳಿತ, ತಳ್ಳಾಟ, ನೂಕಾಟ ನಡೆದು ಹಲವಾರು ಭಕ್ತರು ಪರದಾಡಿದರು. ಘಟನೆ ಸಂಬಂಧ ಗ್ರಾಮದ ಕೆಲ ಮುಖಂಡರು ಮಂಗಳವಾರ ಜಿಲ್ಲಾಧಿಕಾರಿಗೆ ದೂರು ನೀಡಿ,ಪರಿಸ್ಥಿತಿಯ ನಿರ್ವಹಣೆಗೆ ಮನವಿ ಮಾಡಿದ್ದರು. ಜಿಲ್ಲಾಧಿಕಾರಿಯ ಸೂಚನೆ ಮೇರೆಗೆ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್. ಅರಸಿದ್ದಿ ಅವರು ಸ್ವತಃ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಹುಲಿಗಿಗೆ ಬಂದು ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಶ್ರಮಿಸಿದರು.

ಸಂಸದರಿಂದ ಸಭೆ: ಮಂಗಳವಾರದ ಘಟನೆಯ ಬಗ್ಗೆ ಚರ್ಚಿಸಲು, ಸಂಸದ ರಾಜಶೇಖರ ಹಿಟ್ನಾಳ ಅವರು ದೇವಸ್ಥಾನ ಕಾರ್ಯಾಲಯದ ಸಭಾಂಗಣದಲ್ಲಿ ಅಧಿಕಾರಿಗಳು, ಗ್ರಾಮದ ಪ್ರಮುಖರು ಮತ್ತು ಸಂಘ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಎಚ್. ಪ್ರಕಾಶ್ ರಾವ್ ಅವರನ್ನು ತರಾಟೆಗೆ ತೆಗೆದುಕೊಂಡು, ಸ್ಥಳೀಯಆಡಳಿತಗ್ರಾಮಪಂಚಾಯಿತಿಮತ್ತುಗ್ರಾಮದ ಸಂಘ ಸಂಸ್ಥೆಗಳು, ಸ್ವಯಂಸೇವಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಲು ಸೂಚಿಸಿದರು.

ಗ್ರಾಮ ಪಂಚಾಯಿತಿ ಅಸಹಕಾರ: ದೇವಸ್ಥಾನದಿಂದ ನಮಗೆ ಯಾವುದೇ ಲಾಭ ಇಲ್ಲ ಎಂಬ ಧೋರಣೆ ಹೊಂದಿರುವಗ್ರಾಮಪಂಚಾಯಿತಿಮೊದಲಿನಿಂದಲೂ ದೇವಸ್ಥಾನದ ಕಾರ್ಯಗಳಿಂದ ದೂರವೇ ಉಳಿದಿದೆ ಎಂದು ಗ್ರಾಮಸ್ಥರೊಬ್ಬರು ಮಾಹಿತಿ ನೀಡಿದರು.



ಸಭೆಯಲ್ಲಿ ಪ್ರಾಧಿಕಾರದ ಸದಸ್ಯರು, ಗ್ರಾಮದ ಸ್ವಯಂಸೇವಕರು,ಸಂಘಸಂಸ್ಥೆಯಪದಾಧಿಕಾರಿಗಳು, ಪಿಎಸ್ಐ ಎಚ್.ಸುನೀಲ್ ಪಾಲ್ಗೊಂಡಿದ್ದರು ಎಂದು ತಿಳಿದುಬಂದಿದೆ.

ಆಟೋಮೂಲಕಪ್ರಚಾರ:ಮಂಗಳವಾರದಘಟನೆಯ ನಂತರ ಎಚ್ಚೆತ್ತುಕೊಂಡ ಗ್ರಾಮ ಪಂಚಾಯಿತಿ, ಪೊಲೀಸ್ ಇಲಾಖೆಯ ನೆರವಿನೊಂದಿಗೆ ಬುಧವಾರ ಆಟೋದಲ್ಲಿ ಧ್ವನಿವರ್ಧಕದ ಮೂಲಕ ಬೀದಿಬದಿ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದರು. ಮುಖ್ಯರಸ್ತೆ ಮತ್ತು ಚರಂಡಿಯಿಂದ ಕನಿಷ್ಠ ಮೂರು ಅಡಿ ಹಿಂದಕ್ಕೆ ನಿಮ್ಮ ಅಂಗಡಿ ವ್ಯಾಪಾರ ಇರಬೇಕು. ರಸ್ತೆ ಮಧ್ಯೆ ವ್ಯಾಪಾರ, ವ್ಯವಹಾರ ಮಾಡುವಂತಿಲ್ಲ. ನಿಯಮ ಮೀರಿದ ವರ್ತಕರ ಸಾಮಾನು, ಸರಂಜಾಮಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂಬ ಎಚ್ಚರಿಕೆ ಸಂದೇಶ ನೀಡಿದರು. ದೇವಸ್ಥಾನ ಸಿಬ್ಬಂದಿ ದೇವಸ್ಥಾನದ ರಾಜ ಬೀದಿಯಲ್ಲಿ ವ್ಯಾಪಾರಿಗಳನ್ನು ಹಿಂದೆ ಸರಿಸುವ ಪ್ರಯತ್ನ ಮಾಡಿದರು.

# ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ



**ಕುಕನೂರು :** ಪ್ರತಿ ವರ್ಷದಂತೆ ಶೀಗಿ ಹುಣ್ಣಿಮೆ ದಿನ ಪಟ್ಟಣದ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಇಲ್ಲಿನ ಕೋಳಿಪೇಟೆಯ ಮೈಲಾರಲಿಂಗೇಶ್ವರ ದೇವಸ್ಥಾನದಶಿಬಾರಕಟ್ಟೆಯಿಂದಮೈಲಾರಲಿಂಗೇಶ್ವರ ಭಾವಚಿತ್ರದ ಮೆರವಣಿಗೆಯು ಡೊಳ್ಳು ಕುಣಿತದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಾದ ಅಂಬೇಡ್ಕರ್ ವೃತ್ತ, ಶಿರೂರು ವೀರಭದ್ರಪ್ಪ ವೃತ್ತದ ಮೂಲಕ ಪುನಃ ದೇವಸ್ಥಾನಕ್ಕೆ ಮೆರವಣಿಗೆ ಸಾಗಿತು.

ದೇವಪ್ಪ ಸೋಬಾನದ, ಬಸವರಾಜ ಸಬರದ, ಯಲ್ಲಪ್ಪ ಕಲಾಲ್, ಶಿವಪ್ಪ ಸಂದಿಮನಿ, ಬಸಪ್ಪ ಲೋಳಗೊಂಡರ, ಮಲ್ಲಿಕಾರ್ಜುನ ಗೋರ್ಲೆಕೊಪ್ಪ, ಶೇಖಪ್ಪ ಗೋರ್ಲೆಕೊಪ್ಪ, ಈಶಪ್ಪ ಸಬರದ, ರಾಮಣ್ಣ, ಗೊರವಪ್ಪನವರ ಹಾಜರಿದ್ದರು.

# ಮಹರ್ಷಿ ನೈಜ ವ್ಯಕ್ತಿತ್ವ ಮರೆಮಾಚಿದ ಇತಿಹಾಸ: ಶಾಸಕ ದೊಡ್ಡನಗೌಡ ಪಾಟೀಲ ಅಸಮಾಧಾನ



**ಕುಷ್ಟಗಿ:** 'ಮನುಕುಲದದಾರಿದೀಪದಂತಿರುವ ರಾಮಾಯಣ ಮಹಾಕಾವ್ಯದ ಮೂಲಕ ದೊಡ್ಡ ಕೊಡುಗೆ ನೀಡಿರುವ ಮಹರ್ಷಿ ವಾಲ್ಮೀಕಿ ಅವರ ನೈಜ ವ್ಯಕ್ತಿತ್ವನ್ನು ಇತಿಹಾಸದ ಪುಟಗಳಲ್ಲಿ ಮರೆಮಾಚಲಾಗಿದ್ದು, ಆಗಿರುವ ತಪ್ಪುಗಳನ್ನು ಸರಿಪಡಿಸುವ ಪ್ರಯತ್ನ ನಡೆಬೇಕಿದೆ' ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲ್ಲೂಕು ಆಡಳಿತ ಹಾಗೂ ವಾಲ್ಮೀಕಿ ನಾಯಕ ಸಮುದಾಯದ ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹರ್ಷಿ ವಾಲ್ಮೀಕಿಜಯಂತಿಕಾರ್ಯಕ್ರಮಉದ್ಘಾಟಿಸಿ ಮಾತನಾಡಿದ ಅವರು, 'ವಾಲ್ಮೀಕಿ ಒಬ್ಬ ದಡ್ಡ, ದರೋಡೆಕೋರ ನಂತರ ನಾರದ ಮುನಿಯ ಮಾರ್ಗದರ್ಶನದಿಂದ ದೊಡ್ಡ ವ್ಯಕ್ತಿಯಾದ ಎಂದು ಹೇಳಲಾಗುತ್ತಿದೆ. ಅಂದರೆ ವಾಲ್ಮೀಕಿ ಬುದ್ಧಿವಂತನಾಗಿರಲಿಲ್ಲ ಎಂಬುದು ಎಷ್ಟರಮಟ್ಟಿಗೆ ಸರಿ ಎಂಬುದು ಚಿಂತನೆಗೆ ಒಳಪಡಬೇಕಿರುವ ಸಂಗತಿ' ಎಂದರು.

ರಾಮಾಯಣ, ಮಹಾಭಾರತ ಸೇರಿದಂತೆ ಬಹುತೇಕ ಮಹಾಕಾವ್ಯಗಳು ರಚನೆಗೊಂಡಿದ್ದು ಶೂದ್ರ ಸಮುದಾಯದವರಿಂದಲೇ ಎಂಬುದು ವಿಶೇಷ. ಅಂತಹ ಇತಿಹಾಸವನ್ನು ಯುವಪೀಳಿಗೆ ತಿಳಿಯಬೇಕು. ಅಂದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ' ಎಂದರು. ಅಲ್ಲದೆ ಪಟ್ಟಣದಲ್ಲಿ ಮುಂದಿನ ವರ್ಷದ ಜಯಂತಿ ವೇಳೆಗೆ ನಿರ್ಮಿಸಲು ಸಂಕಲ್ಪಿಸಿರುವ ಮಹರ್ಷಿ ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆಗೆ ಅಗತ್ಯವಿರುವ ಎಲ್ಲ ರೀತಿಯ ನೆರವು ನೀಡುವುದಾಗಿಯೂ ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಶರಣಪ್ಪ ಪೂಜಾರ, 'ವಾಲ್ಮೀಕಿ ಕಳ್ಳ, ಡಕಾಯಿತ ಎಂಬುದು ಸುಳ್ಳು ಎಂದು ನ್ಯಾಯಾಲಯಗಳ ತೀರ್ಪುಗಳು ಹೇಳುತ್ತವೆ. ಹಾಗಾಗಿ ವಾಲ್ಮೀಕಿ ಮೊದಲು ಡಕಾಯಿತನಾಗಿದ್ದ ಎಂದು ಯಾರೇ ಹೇಳಿದರೂ ಉತ್ತರ ಪ್ರದೇಶ ರಾಜ್ಯದಲ್ಲಿ ಎಫ್ಐಆರ್ ದಾಖಲಾಗುತ್ತದೆ. ಅಂತಹ ವ್ಯವಸ್ಥೆ ಎಲ್ಲ ಕಡೆ ಬರಬೇಕಿದೆ' ಎಂದರು.

ತಹಶೀಲ್ದಾರ್ ಅಶೋಕ ಶಿಗ್ಗಾಂವಿ, ಪ್ರಮುಖರಾದ ಕೆ.ಮಹೇಶ, ದೊಡ್ಡಬಸನಗೌಡ ಬಯ್ಯಾಪುರ, ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಮಾನಪ್ಪ ತಳವಾರ, ರವಿಕುಮಾರ ಹಿರೇಮಠ ಇತರರು ಮಾತನಾಡಿದರು.

ಪುರಸಭೆ ಅಧ್ಯಕ್ಷ ಮಹಾಂತೇಶ ಕಲಭಾವಿ, ಸದಸ್ಯ ವಸಂತ ಮೇಲಿನಮನಿ, ಕಾರ್ಯನಿರ್ವಹಣಾಧಿಕಾರಿ ಪಂಪಾಪತಿ ಹಿರೇಮಠ, ಸಿಪಿಐ ಯಶವಂತ ಬಿಸನಳ್ಳಿ, ಪಿಎಸ್ಐ ಹನುಮಂತಪ್ಪ ತಳವಾರ, ಬಿಇಒ ಉಮಾದೇವಿ, ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ, ನಜೀರಸಾಬ್ ಮೂಲಿಮನಿ, ಮಾಲತಿ ನಾಯಕ, ಶಶಿಧರ ಕವಲಿ, ದೇವಪ್ಪ ಗಂಗನಾಳ, ಚೌಡಪ್ಪ ಪೊಲೀಸಪಾಟೀಲ, ಪ್ರಾಚಾರ್ಯ ಎಸ್.ವಿ.ಡಾಣಿ, ಶಾಂತಪ್ಪ ಗುಜ್ಜಲ, ಆರ್.ಕೆ.ಸುಬೇದಾರ, ಬಾಲಪ್ಪ ನಾಯಕ, ಶಿವನಗೌಡ ನಾಯಕ ಇತರರು ಇದ್ದರು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ವೀರಪ್ಪ ಸ್ವಾಗತಿಸಿದರು.

ಪ್ರಾರಂಭದಲ್ಲಿ ಪ್ರಮುಖ ಬೀದಿಗಳಲ್ಲಿ ಕುಂಭಮೇಳ, ವಾದ್ಯವೃಂದಗಳೊಂದಿಗೆ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ನಡೆಯಿತು. ಇದೇ ಸಂದರ್ಭದಲ್ಲಿ ವಾಲ್ಮೀಕಿ ವೃತ್ತದ ಫಲಕ ಅನಾವರಣ, ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಯಿತು. ವಾಲ್ಮೀಕಿ ಹಾಗೂ ವಿವಿಧ ಸಮುದಾಯಗಳ ಪ್ರಮುಖರು, ಯುವಕರು, ಮಹಿಳೆಯರು ಭಾಗವಹಿಸಿದ್ದರು. ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರಾಚಾರ್ಯ ಎಸ್.ವಿ.ಡಾಣಿ, ಪುರಸಭೆಯಲ್ಲಿ ಅಧ್ಯಕ್ಷ ಮಹಾಂತೇಶ ಕಲಭಾವಿ ವಾಲ್ಮೀಕಿ ಜಯಂತಿ ನಿಮಿತ್ತ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿದರು. ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು.

# ವಯಸ್ಸಿನ ಖಾತ್ರಿ ನಂತರವೇ ಮದುವೆಗೆ ಅವಕಾಶ ನೀಡಿ: ಡಿ.ಸಿ.



**ಕೊಪ್ಪಳ :** ದೇವಾಲಯಗಳಲ್ಲಿ, ಮಸೀದಿಗಳಲ್ಲಿ ಹಾಗೂ ಚರ್ಚ್‌ಗಳಲ್ಲಿ ನಡೆಯುವ ಎಲ್ಲ ವಿವಾಹಗಳಲ್ಲಿ ವಧು-ವರರ ಅರ್ಹ ವಯಸ್ಸಿನ ದೃಢೀಕರಣದ ನಂತರವೇ ಅರ್ಚಕರು, ಮೌಲ್ವಿಗಳು ಹಾಗೂ ಪಾದ್ರಿಗಳು ವಿವಾಹಕ್ಕೆ ಅವಕಾಶ ನೀಡಬೇಕು ಎಂದು ಜಿಲ್ಲಾಧಿಕಾರಿ ಸುರೇಶ ಬಿ.ಇಟ್ನಾಳ ಸೂಚಿಸಿದ್ದಾರೆ.

ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಜಿಲ್ಲಾಡಳಿತವು ಹಲವಾರು ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೂ ಮಕ್ಕಳಿಗೆ ವಿವಾಹ ಮಾಡಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತಿದೆ. ಬಾಲ್ಯವಿವಾಹ ನಿಷೇಧ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಯಾಗಬೇಕು. ವಿವಾಹದ ವೇಳೆಗೆ ವಧುವಿಗೆ 18 ವರ್ಷ ಹಾಗೂ ವರನಿಗೆ 21 ವರ್ಷ ಪೂರ್ಣವಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರವೇ ಅವಕಾಶ ಕೊಡಬೇಕು' ಎಂದು ಸೂಚಿಸಿದರು.

ಜನನ ಪ್ರಮಾಣ ಪತ್ರ, ಶಾಲಾ ದಾಖಲಾತಿ ಪ್ರಮಾಣ ಪತ್ರ, ಎರಡೂ ದಾಖಲಾತಿ ಇಲ್ಲದ ಸಂದರ್ಭದಲ್ಲಿ ಮಾತ್ರ ಜಿಲ್ಲಾ ಶಸ್ತ್ರ ಚಿಕಿತ್ಸಕರು ನೀಡಿದ ವೈದ್ಯಕೀಯ ಪ್ರಮಾಣ ಪತ್ರಗಳು ಮಾತ್ರ ಮಾನ್ಯವಾಗಿದ್ದು ಉಳಿದ ಯಾವ ದಾಖಲಾತಿಗಳಿಗೆ ಮಾನ್ಯತೆ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

# ಶೂ ಎಸೆತ ಯತ್ನ ಪ್ರಕರಣ: ಕಠಿಣ ಕ್ರಮಕ್ಕೆ ಆಗ್ರಹ




**ಹೂವಿನಹಡಗಲಿ :** ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಬಿ.ಆರ್.ಗವಾಯಿ ಅವರತ್ತ ನ್ಯಾಯಾಲಯದಲ್ಲೇ ಶೂ ಎಸೆಯುವ ಯತ್ನಿಸಿದ ವಕೀಲ ಕಿಶೋರ್ ಎಂಬಾತನನ್ನು ಬಂಧಿಸುವಂತೆ ಆಗ್ರಹಿಸಿ ಪಟ್ಟಣದಲ್ಲಿ ಗುರುವಾರ ಸಂವಿಧಾನ ರಕ್ಷಣೆಗಾಗಿ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ ಸಿಪಿಐ ತಾಲೂಕು ವೇದಿಕೆ ವತಿಯಿಂದ ಶಾಸ್ತ್ರೀಯ ವೃತ್ತ ಬಳಿ ಪ್ರತಿಭಟನೆ ನಡೆಸಲಾಯಿತು.

ಇದೇ ವೇಳೆ ಅ.ಭಾ.ದ.ಹ.ಆಂದೋಲನ ರಾಜ್ಯ ಉಪಾಧ್ಯಕ್ಷ ಹಲಗಿ ಸುರೇಶ , ಸಿಪಿಐ ತಾಲೂಕು ಕಾರ್ಯದರ್ಶಿ ಬಸವರಾಜ ಸಂಶಿ ,

ದಲಿತ ಸೇವಾ ಅಧ್ಯಕ್ಷ ಸಿ.ದುರುಗೇಶ ಮಾತನಾಡಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಾಲಯಕ್ಕೆ ಉನ್ನತ ಸ್ಥಾನ, ಗೌರವ ಎಲ್ಲವೂ ಇದೆ.

ಇಂತಹ ಉನ್ನತ ಸ್ಥಾನದಲ್ಲಿನ ವ್ಯಕ್ತಿಗಳನ್ನೇ ಅವಮಾನಿಸುವಂತ ಹಂತ ತಲುಪಿರುವ ಬಲಪಂಥೀಯ ಕೋಮುವಾದಿಗಳು ದೇಶಕ್ಕೆ ಕಂಟಕವಾಗಲಿದ್ದಾರೆ.

ನ್ಯಾಯಾಧೀಶರತ್ತ ಶೂ ಎಸೆಯಲು ಮುಂದಾದ ವಕೀಲ ಕಿಶೋರ್ ಎಂಬುವರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳದೆ ಹೋದರೆ ನ್ಯಾಯಾಲಯಗಳ ಗೌರವ ಕುಂದಲಿದೆ ಎಂದರು. ಇಂತಹ ಘಟನೆ ಮರುಕಳಸದಂತೆ ಎಚ್ಚರ ವಹಿಸಬೇಕು.

ನ್ಯಾಯಾಧೀಶರತ್ತ ಶೂ ಎಸೆಯಲು ಯತ್ನಿಸಿರುವ ಪ್ರಕರಣ ಅತ್ಯಂತ ಗಂಭೀರವಾದ ಸಂಗತಿಯಾಗಿದೆ. ಈ ಮತೀಯ ಕೋಮುವಾದ ಈಗಲೇ ಅಂತ್ಯವಾಗುವಂತೆ ನ್ಯಾಯಾಲಯ ಕಠಿಣ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ನಂತರ ಕಠಿಣ ಕ್ರಮಕ್ಕೆ ತಹಶಿಲ್ದಾರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು. ಅಂಬೇಡ್ಕರ ಸೇನಾ ಸಮಿತಿ ಅಧ್ಯಕ್ಷ ಎ.ಭರಮಪ್ಪ.ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಬಿ.ಆನಂದ:.ಎ.ದೇವರಾಜ್.
ದಡರಟಿ.
ದೇವೇಂದ್ರಪ.ಇತರರು
ಭಾಗವಹಿಸಿದ್ದರು

# ಅತ್ಯಂತ ಅಪಾಯದಲ್ಲಿ ತುಂಗಭದ್ರಾ ನದಿ: ಮಹಿಮಾ ಪಟೇಲ್ ಕಳವಳ

**ಕಾರಟಗಿ :** 'ದೇಶದ ಅತ್ಯಂತ ಅಪಾಯದಲ್ಲಿರುವ ನದಿಗಳಲ್ಲಿ ತುಂಗಭದ್ರಾ ಒಂದಾಗಿದೆ. ವಿವಿಧ ನೀರಾವರಿ ಯೋಜನೆಗಳು, ಕೈಗಾರಿಕಾ ತ್ಯಾಜ್ಯ ಮತ್ತು ಕೃಷಿ ರಾಸಾಯನಿಕಗಳಿಂದ ನದಿಯು ಜೀವಸಂಕುಲಕ್ಕೆ ತೀವ್ರ ಹಾನಿಯನ್ನುಂಟು ಮಾಡುತ್ತಿದೆ' ಎಂದು ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ರಾಜ್ಯ ಸಂಚಾಲಕ ಮಹಿಮಾ ಪಟೇಲ್ ತೀವ್ರ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಶರಣಬಸವೇಶ್ವರ ದೇವಸ್ಥಾನದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ, ಶಿವಮೊಗ್ಗದ ಪರ್ಯಾವರಣ ಟ್ರಸ್ಟ್ ಮತ್ತು ಕೊಪ್ಪಳ ಜಿಲ್ಲಾ ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಸಹಯೋಗದಲ್ಲಿ ನಡೆದ ಅಭಿಯಾನದ ಕಿಷ್ಕಿಂದೆಯಿಂದ ಮಂತ್ರಾಲಯದವರೆಗಿನ 3ನೇ ಹಂತದ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಹಿಂದಿನವರು ನಿಷ್ಠೆಯಿಂದ ನೀರಿನ ಮೂಲವನ್ನು ಸಂರಕ್ಷಿಸುತ್ತಿದ್ದರು. ಈಗೆಲ್ಲಾ ಸ್ವಾರ್ಥಮಯ ಜನರಿಂದ ನದಿಗಳು ಅಪಾಯದ ಸ್ಥಿತಿಯಲ್ಲಿವೆ. ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಜೀವನಾಡಿಯಾಗಿರುವ ತುಂಗಭದ್ರಾ ನದಿ 2040ರ ವೇಳೆಗೆ ಅತ್ಯಂತ ವಿಷಕಾರಿ ಮಟ್ಟ ತಲುಪಲಿದೆ. ಜಲಾನಯನ ಪ್ರದೇಶದಲ್ಲಿ ಅರಣ್ಯ ನಾಶದಿಂದ ಮಳೆ ನೀರು ಇಂಗುವಿಕೆ ಪ್ರಮಾಣ ಕಡಿಮೆಯಾಗಿ ಮಳೆಗಾಲದಲ್ಲಿ ಪ್ರವಾಹ ಮತ್ತು ಬೇಸಿಗೆಯಲ್ಲಿ ಬರ ಪರಿಸ್ಥಿತಿ ಸಹಜವಾಗಿ ಅನೇಕ ಸಮಸ್ಯೆಗಳು ಹುಟ್ಟುತ್ತಿವೆ. ನದಿ ಪಾತ್ರದಲ್ಲಿ ಚರಂಡಿ ನೀರು ಶುದ್ಧೀಕರಣ ಘಟಕಗಳಿರದೇ, ಆ ನೀರು ನದಿ ಸೇರುತ್ತಿದೆ.

ಹೀಗೆಯೇ ಮುಂದುವರಿದರೆ ಗಂಗಾ ಸ್ನಾನ, ತುಂಗಾ ಪಾನ ಎಂಬ ಮಾತು ನಗೆಪಾಟಲಿಗೀಡಾಗಲಿದೆ. ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಅಭಿಯಾನ, ಜಾಗೃತಿ ಕಾರ್ಯದ ಮೂಲಕ ಸರ್ಕಾರಕ್ಕೆ ಎಚ್ಚರಿಸಲಾಗುತ್ತಿದೆ' ಎಂದು ಹೇಳಿದರು.

ಜಿಲ್ಲಾ ಸಂಚಾಲಕ ಶಿವಕುಮಾರ ಮಾಲಿಪಾಟೀಲ್ ಮಾತನಾಡಿ, 'ತುಂಗಭದ್ರಾ ನೀರಿನ ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪರಿಣಾಮವಾಗಿ ಕ್ಯಾನ್ಸರ್, ಜಾಂಡೀಸ್ ಸೇರಿದಂತೆ ಹಲವು ಮಾರಕ ರೋಗಗಳು ವ್ಯಾಪಿಸುತ್ತಿವೆ. ನದಿಯ ಪಾವಿತ್ರ್ಯತೆ ಕಾಪಾಡಿ, ಮುಂದಿನ ಪೀಳಿಗೆಗೆ ಉಳಿಸಲು ಪ್ರತಿಯೊಬ್ಬರೂ ತಮ್ಮ ಹೊಣೆಗಾರಿಕೆ ಅರಿಯಬೇಕಾಗಿದೆ' ಎಂದರು.

ಆಂದೋಲನದ ದಕ್ಷಿಣ ಭಾರತ ಸಂಚಾಲಕ ಟಿ.ಮಾಧವನ್, ಜಿಲ್ಲಾ ಸಂಚಾಲಕ ರಾಘವೇಂದ್ರ ತೂನಾ, ತಾ.ಪಂ. ಮಾಜಿ ಅಧ್ಯಕ್ಷ ಮಹಮ್ಮದ್ ರಫೀ, ವಿಷ್ಣು ಜೋಷಿ, ಜಾಗೃತ ಯುವಕ ಸಂಘದ ಅಧ್ಯಕ್ಷ ಬಸವರಾಜ ಶೆಟ್ಟರ್, ಪ್ರಮುಖರಾದ ಗಿರಿಜಾಶಂಕರ ಪಾಟೀಲ್, ಕರಿಸಿದ್ದನಗೌಡ ಪಾಟೀಲ್ ಬೂದಗುಂಪಾ, ಖಾಜಾಹುಸೇನ್ ಮುಲ್ಲಾ, ಶರಣಯ್ಯಸ್ವಾಮಿ ಯರಡೋಣಾ, ವಿಜಯಲಕ್ಷ್ಮಿ ಮೇಲಿನಮನಿ, ರೈತ ಮುಖಂಡರಾದ ಸಿದ್ದರಾಮ ರ್‍ಯಾವಳದ ಚಳ್ಳೂರು, ವೀರನಗೌಡ ಮಾಲಿಪಾಟೀಲ್, ಮರಿಯಪ್ಪ ಸಾಲೋಣಿ, ನಾರಾಯಣ ಈಡಿಗೇರ, ಸುರೇಶ ಚಿರ್ಚನಗುಡ್ಡ, ಚನ್ನಬಸಪ್ಪ ಸುಂಕದ, ಶಿಲ್ಪಾ ದಿವಟರ್, ಬಸವರಾಜ ಪಗಡದಿನ್ನಿ, ಮಂಜುನಾಥ ಮಸ್ಕಿ ಉಪಸ್ಥಿತರಿದ್ದರು. ತಲೇಖಾನ ವೀರಭದ್ರ ಶರಣರು ಸಾನ್ನಿಧ್ಯ ವಹಿಸಿದ್ದರು. ಅಭಿಯಾನದ ಪ್ರತಿಜ್ಞಾ ವಿಧಿಯನ್ನು ಪ್ರಭು ಉಪನಾಳ ಬೋಧಿಸಿದರು.

ಕಸಾಪ ತಾಲ್ಲೂಕಾಧ್ಯಕ್ಷ ಶರಣಪ್ಪ ಕೋಟ್ಯಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಜಗದೀಶ ಭಜಂತ್ರಿ ಕಾರ್ಯಕ್ರಮ ನಿರ್ವಹಿಸಿದರು.

# ಜನರ ಸಮಸ್ಯೆಗೆ ಧ್ವನಿಯಾಗುವೆ: ಶಾಸಕ ಡಾ. ಶ್ರೀನಿವಾಸ್



**ಕೂಡ್ಲಿಗಿ :** 'ಜನರ ಸಮಸ್ಯೆಗಳಿಗೆ ನಾವು ಧ್ವನಿಯಾಗಬೇಕಾಗಿದ್ದು, ಸ್ಥಳೀಯವಾಗಿ ಅದನ್ನು ಈಡೇರಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ' ಎಂದು ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಹೇಳಿದರು.

ತಾಲ್ಲೂಕಿನ ಸೂಲದಹಳ್ಳಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗ್ರಾಮ ಪಂಚಾಯಿತಿ ಮಟ್ಟದ 'ಮನೆ ಮನೆಗೆ ನಮ್ಮ ಶಾಸಕರು ಮನೆ ಬಾಗಿಲಿಗೆ ನಮ್ಮ ಸರ್ಕಾರ' ಎಂಬ ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸೂರು ಮತ್ತು ಉದ್ಯೋಗ ಜನರ ನಿರೀಕ್ಷೆಯಾಗಿದ್ದು, ಸರ್ಕಾರ ರೂಪಿಸಿದ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸಬೇಕಿದೆ. ತಾಲ್ಲೂಕಿಗೆ ಎರಡು ಕೆರೆಗಳು ಮಂಜೂರಾಗಿದ್ದು, ಇವು ಶಾಶ್ವತ ಕೆಲಸಗಳಾಗಿವೆ. ಪ್ರತಿ ಪಂಚಾಯಿತಿಗೂ ಭೇಟಿ ನೀಡಿ ಜನರ ಸಮಸ್ಯೆ ಆಲಿಸಲಾಗುತ್ತದೆ' ಎಂದರು.

ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಅರ್ಜಿಗಳನ್ನು ಸಾರ್ವಜನಿಕರಿಂದ ಸ್ವೀಕರಿಸಲಾಯಿತು. ಬೆಳಿಗ್ಗೆ ಗ್ರಾಮದಲ್ಲಿ ಶ್ರಮದಾನ ಮಾಡುವ ಮೂಲಕ ಶಾಸಕರು, ಅಧಿಕಾರಿಗಳು ಸ್ವಚ್ಛತಾ ಕಾರ್ಯ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರು ಮಾತನಾಡಿದರು. ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ, ತಹಾಶೀಲ್ದಾರ್ ವಿ.ಕೆ. ನೇತ್ರಾವತಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನರಸಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬೋವಿ ರತ್ನಮ್ಮ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶ್ಯಾಮಪ್ಪ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎಸ್. ವೆಂಕಟೇಶ್, ಮುಖಂಡರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು.

## ಸ್ವಚ್ಛ ವಿಧಾನ ಸಭೆ ಅಭಿಯಾನದ ಹೋರಾಟಗಾರ ನಾಗರಾಜ ಕಲಕುಟಗರಗೆ ವಿಜಯಪುರಕ್ಕೆ ಸ್ವಾಗತಿಸಿದ:ಮಲ್ಲಿಕಾರ್ಜುನ ಕೆಂಗನಾಳ




**ವಿಜಯಪುರ :** ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಉಳುವಿಗಾಗಿ ಭ್ರಷ್ಟಾಚಾರ ಮುಕ್ತ ಪಾರದರ್ಶಕ ಆಡಳಿತಕ್ಕಾಗಿ ಬಾಗಲಕೋಟದ ಸಾಮಾಜಿಕ ಹೋರಾಟಗಾರ ನಾಗರಾಜ ಶಿ ಕಲಕುಟಗರ ಅವರು ರಾಜ್ಯದಲ್ಲಿ ಹಮ್ಮಿಕೊಂಡಿರುವ ಸ್ವಚ್ಛ ವಿಧಾನ ಸಭೆ ಜನ ಜಾಗೃತಿ ಅಭಿಯಾನದ ಅಂಗವಾಗಿ ವಿಜಯಪುರಕ್ಕೆ ಆಗಮಿಸಿದ ಸಂದರ್ಭದಲ್ಲಿ ರೈತ ಭಾರತ ಪಕ್ಷದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಕೆಂಗನಾಳ ಹಾಗೂ ವಿವಿಧ ಮುಖಂಡರು ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದ ಮುಂದೆ ಹುಮಾಲೆ ಹಾಕಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ರೈತ ಭಾರತ ಪಕ್ಷದ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಕೆಂಗನಾಳ ಮಾತನಾಡಿ, ಭ್ರಷ್ಟಾಚಾರ ಮುಕ್ತ ಪಾರದರ್ಶಕ ಆಡಳಿತ ನೀಡುವುದು ನಮ್ಮ ರೈತ ಭಾರತ ಪಕ್ಷದ ಉದ್ದೇಶವಾಗಿದೆ. ನಾಗರಾಜ ಕಲಕುಟಗರ ಅವರು ಹಮ್ಮಿಕೊಂಡಿರುವ ಸ್ವಚ್ಛ ವಿಧಾನ ಸಭೆ ಅಭಿಯಾನವು ಜನಪರವಾಗಿದ್ದು ಅವರ ಕಾರ್ಯ ಶ್ಲಾಘನೀಯವಾದದ್ದು ಅವರ ಈ ಅಭಿಯಾನಕ್ಕೆ ನಮ್ಮ ರೈತ ಭಾರತ ಪಕ್ಷ ಬೆಂಬಲಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಸಾಮಾಜಿಕ ಹೋರಾಟಗಾರ ಗಿರೀಶ ಕಲಘಟಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪರಿವರ್ತನೆಯ ಹರಿಕಾರ ಮಹರ್ಷಿ ವಾಲ್ಮೀಕಿ: ಪ್ರೊ. ವಿಜಯಾ ಕೋರಿಶೆಟ್ಟಿ



**ವಿಜಯಪುರ :** "ಒಬ್ಬ ವ್ಯಕ್ತಿ ಪರಿವರ್ತನೆಯಾದರೆ, ಸಮಾಜದ ರೂಪವೇ ಬದಲಾಗಬಹುದು ಎಂಬುದನ್ನು ಮಹರ್ಷಿ ವಾಲ್ಮೀಕಿ ತೋರಿಸಿಕೊಟ್ಟಿದ್ದಾರೆ. ಅವರು ಕೇವಲ ಮಹಾಕವಿ ಮಾತ್ರವಲ್ಲ, ಪರಿವರ್ತನೆಯ ಹರಿಕಾರರಾಗಿದ್ದಾರೆ," ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಹೇಳಿದರು. ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಾಲ್ಮೀಕಿ ರಾಮಾಯಣವು ಕೇವಲ ಸಾಹಿತ್ಯ ಕೃತಿ ಅಲ್ಲ, ಅದು ಆದರ್ಶ ಜೀವನದ ದಾರಿದೀಪ. ಅದರಲ್ಲಿ ಕಾಣುವ ಪಾತ್ರಗಳು ಸಮಾಜಕ್ಕೆ ಅಗತ್ಯವಾದ ಮೌಲ್ಯಗಳನ್ನು ಸಾರುತ್ತವೆ. ಆ ಮೌಲ್ಯಗಳನ್ನು ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು. ವಿಶ್ವವಿದ್ಯಾಲಯದ ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, "ಮಹರ್ಷಿ ವಾಲ್ಮೀಕಿಯವರು ರಾಮಾಯಣ ರಚಿಸುವ ಮೊದಲು ಸಮಾಜದ ಓರೆಕೋರೆಗಳು, ಮಾನವ ಜೀವನದ ವಿವಿಧ ಆಯಾಮಗಳು ಹಾಗೂ ನೈತಿಕ ಮೌಲ್ಯಗಳ ಕುರಿತು ಸುದೀರ್ಘ ಅಧ್ಯಯನ ನಡೆಸಿದ್ದರು. ರಾಮಾಯಣದಲ್ಲಿ ವೈಜ್ಞಾನಿಕ ಚಿಂತನೆ, ಸಾಮಾಜಿಕ ಮೌಲ್ಯಗಳು ಮತ್ತು ಪರಿಸರ ಪ್ರಜ್ಞೆಯಂತಹ ಅನೇಕ ಅಂಶಗಳು ಒಳಗೊಂಡಿವೆ.

ಇಂದಿಗೂ ವಿಶ್ವದ ಹಲವು ರಾಷ್ಟ್ರಗಳಲ್ಲಿ ರಾಮಾಯಣ ಪಠ್ಯಕ್ರಮದ ಭಾಗವಾಗಿದೆ ಎಂಬುದು ಅವರ ಕೃತಿಯ ಶಾಶ್ವತತೆಯ ಸಾಕ್ಷಿಯಾಗಿದೆ ಎಂದು ಹೇಳಿದರು.

ಕನ್ನಡ ವಿಭಾಗದ ಪ್ರಾಧ್ಯಾಪಕ ಪ್ರೊ.ನಾಗರಾಜ್ ಮಾತನಾಡಿ, ಮಹರ್ಷಿ ವಾಲ್ಮೀಕಿ ಜಗತ್ತಿನ ದಾರ್ಶನಿಕ ಮಹಾಕವಿಗಳಲ್ಲಿ ಅಗ್ರಗಣ್ಯರು. ಅವರ ಸಾಧನೆ ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕ. ರಾಮಾಯಣದ ಪ್ರತಿಯೊಂದು ಪಾತ್ರಕ್ಕೂ ಅವರು ಜೀವ ತುಂಬಿದ್ದಾರೆ.

ಇಂದು ರಾಮಾಯಣದ ಕುರಿತಾಗಿ ವಿಶ್ವದಾದ್ಯಂತ ಸಂಶೋಧನೆಗಳು, ಅಧ್ಯಯನಗಳು ನಿರಂತರವಾಗಿ ನಡೆಯುತ್ತಿವೆ, ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣನವರ್,
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ನಿರ್ದೇಶಕ ಪ್ರೊ.ಎನ್.ಎಲ್. ಮಲ್ಲಿಕಾರ್ಜುನ,
ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವೈದ್ಯಕೀಯ ಕಾಲೇಜು: ಪಿಪಿಪಿ ಮಾದರಿಗೆ ವಿರೋಧ




**ಮುದ್ದೇಬಿಹಾಳ:** ವಿಜಯಪುರದಲ್ಲಿ ಸರ್ಕಾರ ಪಿಪಿಪಿ ಮಾದರಿಯ ವೈದ್ಯಕೀಯ ಕಾಲೇಜು ಸ್ಥಾಪನೆಗೆ ವಿರೋಧ ಇದ್ದರೂ ಅದರ ಕುರಿತಾಗಿಯೇ ಜನಪ್ರತಿನಿಧಿಗಳು ಹೇಳಿಕೆ ಕೊಡುತ್ತಿರುವುದು ಖಂಡನೀಯ. ಜಿಲ್ಲೆಯ ಸಂಸದರು ಈ ವಿಷಯದಲ್ಲಿ ಮೌನವಹಿಸಿರುವುದು ಸರಿಯಲ್ಲ ಎಂದು ಕಾರ್ಮಿಕ ಮುಖಂಡ ಮಲ್ಲಿಕಾರ್ಜುನ ಎಚ್.ಟಿ.ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಗೆ ಆಗಮಿಸಿದ್ದ ಪ್ರತಿಭಟನಾಕಾರರು, ಪಿಪಿಪಿ ಮಾದರಿ ವೈದ್ಯಕೀಯ ಕಾಲೇಜಿಗೆ ವಿರೋಧ ವ್ಯಕ್ತಪಡಿಸಿದರು.

ವಕೀಲ ಕೆ.ಬಿ.ದೊಡಮನಿ ಮಾತನಾಡಿ, ಪಿಪಿಪಿ ಮಾದರಿಯ ವೈದ್ಯಕೀಯ ಕಾಲೇಜು ಯೋಜನೆಯು ಸಾರ್ವಜನಿಕ ಆಸ್ಪತ್ರೆಯನ್ನು ಖಾಸಗಿ ಕೈಗಳಿಗೆ ಒಪ್ಪಿಸುವ ಅಪಾಯವನ್ನು ಹೊಂದಿದ್ದು, ಇದು ಸಾರ್ವಜನಿಕ ಪ್ರವೇಶ, ಪಾರದರ್ಶಕತೆ ಮತ್ತು ಆರೋಗ್ಯ ಸೇವೆಗಳ ಲಭ್ಯತೆ ಹಾಗೂ ಖರ್ಚುಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಪ್ರತಿಭಟನಾಕಾರರು ತೀವ್ರವಾಗಿ ಖಂಡಿಸಿದರು. ಸಾರ್ವಜನಿಕ ಹಣದಿಂದ ನಿರ್ಮಿತವಾದ ಸರ್ಕಾರಿ ಆಸ್ಪತ್ರೆಯ ಮೂಲ ಉದ್ದೇಶವನ್ನೇ ಇದು ಹಾಳುಮಾಡುತ್ತದೆ ಎಂದು ಅವರು ಎಚ್ಚರಿಸಿದರು.

ಮನವಿಯಲ್ಲಿ ಪಿಪಿಪಿ ವೈದ್ಯಕೀಯ ಕಾಲೇಜು ಸ್ಥಾಪನೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುತ್ತದೆ. ಅಗತ್ಯ ಸೇವೆಗಳ ಖಾಸಗೀಕರಣವನ್ನು ಹೆಚ್ಚಿಸುತ್ತದೆ. ಸಾಮಾನ್ಯ ಕುಟುಂಬಗಳಿಗೆ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸೇವೆಗಳ ವೆಚ್ಚವನ್ನು ಹೆಚ್ಚಿಸುತ್ತದೆ. ಸರ್ಕಾರವು ಪಿಪಿಪಿ ಮಾದರಿಯಿಂದ ಹಿಂದೆ ಸರಿದು, ಸಾರ್ವಜನಿಕ ಹೂಡಿಕೆಯನ್ನು ಬಲಪಡಿಸಿ, ಎಲ್ಲರಿಗೂ ಸಮಾನ, ಲಭ್ಯವಿರುವ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣವನ್ನು ಖಚಿತಪಡಿಸಬೇಕು ಎಂದು ತಿಳಿಸಲಾಗಿದೆ.

ಶಿರಸ್ತೇದಾರ ಎಂ.ಎಸ್.ಬಾಗೇವಾಡಿ ಅವರಿಗೆ ಮನವಿ ಸಲ್ಲಿಸಲಾಯಿತು. ಹೋರಾಟಗಾರರಾದ ಸಂಗಮ್ಮ ಬಿರಾದಾರ, ಸಾವಿತ್ರಿ ನಾಗರತ್ತಿ, ರೇಣುಕಾ ಹಡಪದ, ಶರಣಮ್ಮ ಅಂಗಡಿ, ರೆಘೀವಿಯರ್, ಬಂದಗೀಸಾಬ, ಭಾರತಿ ನಿಡಗುಂದಿ, ಟೀನಾ ಸೇರಿದಂತೆ ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟ ಸಮಿತಿ, ಮುದ್ದೇಬಿಹಾಳ ಘಟಕ ಮತ್ತು ಕಿತ್ತೂರು ಚೆನ್ನಮ್ಮ ಸ್ವಸಹಾಯ ಸಂಘಗಳ ಒಕ್ಕೂಟ ನೇತೃತ್ವ ನೀಡಿತು. ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಸ್ಥಳೀಯ ಮಹಿಳಾ ಸಂಘಟನೆಗಳು, ಆರೋಗ್ಯ ಹಕ್ಕುಗಳ ಹೋರಾಟಗಾರರು, ಆಶಾ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ವಾಲ್ಮೀಕಿ ಮಹರ್ಷಿ ರಚನೆಯ ಮಹಾಕಾವ್ಯದಲ್ಲಿ ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳು ಧ್ವನಿಸುತ್ತವೆವಿಠ್ಠಲ ಕಟಕಧೋಂಡ

**ವಿಜಯಪುರ :** ರಾಮಾಯಣದ ಮಹಾಕಾವ್ಯದಲ್ಲಿಮಾನವೀಯಹಾಗೂ ಸಾಮಾಜಿಕಮೌಲ್ಯಗಳುಒಳಗೊಂಡಿದ್ದು ಆ ಜೀವನ ಮೌಲ್ಯಗಳನ್ನು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರು ಜಗತ್ತಿಗೆ ನೀಡಿದ್ದಾರ ಎಂದು ಶಾಸಕರಾದ ವಿಠ್ಠಲ ಕಟಕಧೋಂಡ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ವಿಜಯಪುರ ಇವರ ಸಹಯೋಗದಲ್ಲಿ ಮಂಗಳವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮಾತನಾಡಿದ ಅವರು ಆದರ್ಶ ವ್ಯಕ್ತಿಯ ಚಿತ್ರಣ, ಕೌಟುಂಬಿಕ, ಮಾನವೀಯತೆ ಹಾಗೂ ಸಾಮಾಜಿಕ ಮೌಲ್ಯ ಕಾಣಬಹುದಾಗಿದೆ ಮನುಕುಲದ ಏಳಿಗೆಗಾಗಿ ಅವರು ನೀಡಿದ ಸಂದೇಶ ದಾರಿದೀಪವಾಗಿವೆ. ಮಹರ್ಷಿ ಅವರು ರಾಮಾಯಣದ ಮೂಲಕ ಪ್ರತಿಯೊಬ್ಬರುಜೀವನದಲ್ಲಿಎದುರಿಸುವ



ಸಂಗತಿಗಳು ಅಡಕವಾಗಿದ್ದು, ನಿತ್ಯ ಸತ್ಯವಾಗಿರುವ ಜೀವನ ಮೌಲ್ಯಗಳನ್ನು ಹಾಗೂಸಂದೇಶಗಳನ್ನುಮಹಾಕಾವ್ಯದ ಮೂಲಕ ಸಮಾಜಕ್ಕೆ ನೀಡಿದ್ದಾರೆ.

ಆ ವಿಚಾರಗಳನ್ನು ಪಾಲಿಸೋಣ ವಾಲ್ಮೀಕಿ ಮಹರ್ಷಿ ಅವರ ನೀತಿ ಉಕ್ತಿಗಳು ಉತ್ತಮ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಿವೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಆನಂದ.ಕೆ. ಅವರು ಮಾತನಾಡಿ, ವಾಲ್ಮೀಕಿ ಮಹರ್ಷಿ ಅವರು ರಾಮಾಯಣದ ಕಾವ್ಯದಲ್ಲಿ ಉಲ್ಲೇಖಿಸಿರುವ ಚಿಂತನೆಗಳನ್ನು ತಿಳಿದುಕೊಳ್ಳಬೇಕು. ಅದರಲ್ಲಿನ ಅಂಶಗಳು ಸುಂದರ ಭವಿಷ್ಯಕ್ಕೆ ಭದ್ರ ಅಡಿಪಾಯ ಒದಗಿಸುತ್ತವೆ.ಬದುಕಿನ ಧಾವಂತದಲ್ಲಿ ನಮ್ಮನ್ನು ನಾವು ಅಂತರಾವಲೋಕನ ಮಾಡಿಕೊಂಡು, ಉತ್ತಮ ಬದುಕು ರೂಪಿಸಿಕೊಳ್ಳುವವೆಡೆಗೆ ಸಾಗಬೇಕು. ಮಹಾನ್ ವ್ಯಕ್ತಿಗಳು ನೀಡಿದ ಸಂದೇಶ ಅವರ ಚಿಂತನೆಗಳನ್ನು ಅರಿತುಕೊಂಡು ಸಾರ್ಥಕಜೀವನಹೊಂದೋಣ.ಇಂತಹ ಜಯಂತಿಗಳ ಮೂಲಕ ಮಹನೀಯರ ಆದರ್ಶ ಮೌಲ್ಯಗಳನ್ನು ಕೇವಲ ಒಂದು ದಿನಕ್ಕೆ ಸ್ಮರಿಸಿಕೊಳ್ಳದೆ ಅವರ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು. ರಾಮಾಯಣದಲ್ಲಿ ಅಡಕಗೊಂಡ ವಿಚಾರಗಳನ್ನು ಯುವಜನರಿಗೆ ತಿಳಿಸಿಕೊಡಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಸಮಾಜಕ್ಕೆ ತಮ್ಮ ಕೊಡುಗೆ ನೀಡಬೇಕು ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಮಾತನಾಡಿ, ರಾಮಾಯಣದ ಮಹಾಕಾವ್ಯದಲ್ಲಿ ಸಂವಿಧಾನದ ಆಶಯವನ್ನು ಕಾಣಬಹುದಾಗಿದೆ. ಸಮಾನತೆ,ಭ್ರಾತೃತ್ವ,ಒಗ್ಗೂಡಿ ಬಾಳುವಿಕೆಯಂತಹ ಚಿಂತನೆಯನ್ನು ಕಾವ್ಯದಲ್ಲಿ ಚಿತ್ರಿಸಿದ ವಾಲ್ಮೀಕಿಯವರ ತತ್ವಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ನಮ್ಮಲ್ಲಿನ ಕೆಟ್ಟ ಗುಣಗಳನ್ನು ನೀಗಿ ಉತ್ತಮತೆಯನ್ನು ಅಳವಡಿಸಕೊಳ್ಳಲು ರಾಮಯಾಣದ ಅಂಶಗಳು ತಿಳಿಸಿಕೊಡುತ್ತವೆ. ಪ್ರಕೃತಿಯ ಸೌಂದರ್ಯ ಹಾಗೂ ಆರಾಧನೆಯನ್ನು ವಾಲ್ಮೀಕಿಯವರ ಮಹಾಕಾವ್ಯದಲ್ಲಿ ಕಾಣಬಹುದಾಗಿದೆ. ಕಷ್ಟಗಳನ್ನು ಮೆಟ್ಟಿ ನಿಂತು,ನಕಾರಾತ್ಮಕ ಭಾವನೆಗಳನ್ನು ತೊಡೆದು ಹಾಕಿ, ಆತ್ಮ ವಿಶ್ವಾಸದಿಂದ ಮುನ್ನೆಡೆದು ಉನ್ನತ ಸಾಧನೆಗೆ ಮಹರ್ಷಿ ವಾಲ್ಮೀಕಿ ಚಿಂತನೆಗಳಿಂದ ಪ್ರೇರಣೆ ಹೊಂದಬೇಕು ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರಾದ ಯಲ್ಲಪ್ಪ ನಾಯಕ ಅವರು ಉಪನ್ಯಾಸ ನೀಡಿ, ರಾಮಾಯಣ ಮಹಾಕಾವ್ಯದಲ್ಲಿರುವ ಪುಷ್ಪಕ ವಿಮಾನ ಇಂದಿನ ಇಂಜನೀಯರಿಗೆ ಸ್ಪೂರ್ತಿದಾಯಕವಾಗಿದೆ. ತಂದೆಯ ಮಾತಿಗೆಮನ್ನಣೆನೀಡಿದರಾಮನಗುಣ, ಸಹೋದರ ಪ್ರೇಮ, ಆದರ್ಶ ವ್ಯಕ್ತಿತ್ವ ಇಂಥಹ ಅನೇಕ ವಿಚಾರಗಳು ವಾಲ್ಮೀಕಿ ಮಹರ್ಷಿ ಅವರು ರಾಮಾಯಣದ ಮೂಲಕ ಮನುಕುಲಕ್ಕೆ ಉತ್ತಮ ಸಂದೇಶ ಹಾಗೂ ಚಿಂತನೆಗಳನ್ನು ನೀಡಿದ್ದಾರೆ. ರಾಮಾಯಣ ಕಾವ್ಯ 24 ಸಾವಿರ ಶ್ಲೋಕಗಳನ್ನು ಒಳಗೊಂಡಿದೆ. ಇದರಲ್ಲಿನ ವಿಚಾರಗಳನ್ನು ಅರಿತುಕೊಳ್ಳಬೇಕು ಎಂದು ಹೇಳಿದ ಅವರು, ಮಹರ್ಷಿ ವಾಲ್ಮೀಕಿ ಜೀವನ ವೃತ್ತಾಂತ ಕುರಿತಾಗಿ ಸವಿಸ್ತಾರವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ರಂಗನಾಥಬತ್ತಾಸೆಹಾಗೂತಂಡದಿಂದ ನೃತ್ಯ ರೂಪಕ ನೋಡುಗರ ಕಣ್ಮನ ಸೆಳೆಯಿತು.

ಈ ಕಾರ್ಯಕ್ರಮದಲ್ಲಿ ಉಪ ವಿಭಾಗಾಧಿಕಾರಿ, ಗುರುನಾಥ ದಡ್ಡೆ, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಶಿವಾನಂದ ಮಾಸ್ತಿಹೋಳಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಮಹೇಶ ಪೋತದಾರ,ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಹಿಂದುಳಿದ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪುಂಡಲಿಕ ಮಾನವರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವಿರಯ್ಯ ಸಾಲಿಮಠ, ಜಿಲ್ಲಾ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ಅಧ್ಯಕ್ಷಕರಾದ ಎಸ್. ಎಂ.ಪಾಟೀಲ್,

ಮಹಾನಗರ ಪಾಲಿಕೆ ಉಪ ಆಯುಕ್ತರಾದ

ಮಹಾವೀರ ಬೋರಣ್ಣವರ, ಶ್ರೀಮತಿ ಶೀಲಾ ಬಿರಾದಾರ, ಟಿ.ವಿ.ಮಂಟೂರು ಸೇರಿದಂತೆಜಿಲ್ಲಾಮಟ್ಟದಅಧಿಕಾರಿಗಳು, ಸಮಾಜದ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಇತರರು ಉಪಸ್ಥಿತರಿದ್ದರು.

ಮೆರವಣಿಗೆಗೆ ಚಾಲನೆ: ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಮೆರವಣಿಗೆಗ ಚಾಲನೆ ದೊರೆತು ಭವ್ಯ ಮೆರವಣಿಗೆಯು ವಿವಿಧ ಕಲಾ ತಂಡಗಳೊಂದಿಗೆ ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ,

ಕನಕದಾಸ ವೃತ್ತದ ಮಾರ್ಗದ ಮೂಲಕ ಸಾಗಿ ಕಂದಗಲ್ ಶ್ರೀ ಹನುಮಂತರಾಯರ ರಂಗಮಂದಿರದಲ್ಲಿ ಸಮಾವೇಶಗೊಂಡಿತ್ತು.

# ಮುಖ್ಯ ರಸ್ತೆ ದುರಸ್ತಿಗೆ ಆಗ್ರಹಿಸಿ ರಸ್ತೆ ತಡೆ ನಡೆಸಿ ಪ್ರತಿಭಟನೆ

**ವಿಜಯಪುರ :** ನಗರದ ಬಡಿಕಮಾನ್ ದಿಂದ ಅತಾವುಲ್ಲಾ ಸರ್ಕಲ್ ವರೆಗಿನ ಮುಖ್ಯರಸ್ತೆ ಸಂಪೂರ್ಣ ಹದಗೆಟ್ಟು ಹೋಗಿದೆ. ಇದರಿಂದ ಸಾರ್ವಜನಿಕರು ಈ ರಸ್ತೆಯಲ್ಲಿ ಸಂಚರಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ರಸ್ತೆಯನ್ನು ಸಂಬಂಧಿಸಿದ ಮಹಾನಗರ ಪಾಲಿಕೆಯು ಕೂಡಲೆ ದುರಸ್ತಿಗೊಳಿಸಿ ಜನತೆಗೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿ ನಗರದ ನಿವಾಸಿಗಳು ಬಡಿಕಮಾನ್ ಹತ್ತಿರದ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಈ ಪ್ರತಿಭಟನೆಯಲ್ಲಿ ಪಾಲ್ಗೊಂಡ ಇರಫಾನ ಶೇಖ್ ಮಾತನಾಡಿ, ಇಲ್ಲಿನ ವಾರ್ಡ್ ನಂ. 23, 24, 25ರಲ್ಲಿ ಬರುವ ಮುಖ್ಯ ರಸ್ತೆಯಲ್ಲಿ ನಿತ್ಯ ಹಗಲಿರುಳು ಸಹಸ್ರಾರು ಜನರು ಬೈಕ್, ಅಟೋ ಸೇರಿದಂತೆ ವಿವಿಧ ವಾಹನದ ಮೂಲಕ ಸಂಚರಿಸುತ್ತಾರೆ. ಕಳೆದ 3 ವರ್ಷಗಳಿಂದ ಈ ರಸ್ತೆ ಹಾಳಾಗಿದೆ. ಈ ದುಸ್ಥಿತಿ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ನಗರದ ಶಾಸಕರು ಇತ್ತ ಗಮನಿಸುತ್ತಿಲ್ಲ ಎಂದು ದೂರಿದರು. ಇಲಿಯಾಸ ಸಿದ್ದಿಕಿ ಮಾತನಾಡಿ, ಮುಖ್ಯ ಮಾರ್ಗದಲ್ಲಿ ಆಳವಾದ ತಗ್ಗು ಗುಂಡಿಗಳಿವೆ.



ಮಳೆಯಾದರಂತೂ ಇಲ್ಲಿ ಸಂಚರಿಸುವದು ಕರ ಕಷ್ಟ. ಈ ಹಿಂದೆ ರಸ್ತೆಯಲ್ಲಿ ಸಂಚರಿಸಲಾಗದೆ ಹಲವರು ಎಡವಿ ಬಿದ್ದು ಗಾಯಗೊಂಡಿದ್ದಾರೆ. ಆದ್ದರಿಂದ ಪಾಲಕೆಯ ಆಯುಕ್ತರು ಈ ರಸ್ತೆಯಲ್ಲಿ ಜೀವಹಾನಿಯಾಗುವಂಥಹ ಅಪಘಾತಗಳು ಸಂಭವಿಸುವ ಮುನ್ನ ಕೂಡಲೆ ಎಚ್ಚೆತ್ತು. ರಸ್ತೆಯನ್ನು ದುರಸ್ತಿಗೊಳಿಸಬೇಕು ಎಂದು ಆಗ್ರಹಿಸಿದರು. ಹಾಫಿಜ್ ಸಿದ್ದಿಕಿ ಮಾತನಾಡಿ, ರಸ್ತೆಯಿಂದ ಟ್ರಾಫಿಕ್ ಜಾಂ ಮತ್ತು ಪಾದಚಾರಿಗಳಿಗೆ ತೊಂದರೆ ಉಂಟಾಗಿದೆ. ಕೆಸರು ಮತ್ತು ಧೂಳಿನಿಂದ ಸಾರ್ವಜನಿಕ ಆರೋಗ್ಯಕ್ಕೂ ಹಾನಿಯಾಗಿದೆ. ಆದ್ದರಿಂದ ಸರ್ಕಾರ ಕೂಡಲೆ ರಸ್ತೆ ದುರಸ್ತಿಗೊಳಿಸಬೇಕು ಎಂದು ಒತ್ತಾಯಿಸಿದರು. ಬಳಿಕ ಪಾಲಿಕೆಯ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವಿಕರಿಸಿ ಕೂಡಲೆ ರಸ್ತೆ ದುರಸ್ತಿಗೊಳಿಸುವ ಭರವಸೆ ನೀಡಿದರು.

ಈ ಪ್ರತಿಭಟನೆಯಲ್ಲಿ ಆಸಿಫ್ ಇನಾಮದಾರ, ಯಾಕುಬ್ ನಾಟಿಕಾರ, ಜಿಯಾವುಲ್ಲಾ ಪಠಾಣ ಸೇರಿದಂತೆ ನಗರದ ಹಲವು ನಿವಾಸಿಗಳು ಭಾಗವಹಿಸಿದ್ದರು.

# ಯಾವ ಜಂಟಿ ಸಮೀಕ್ಷೆ ಮಾಡುವುದು ಅವಶ್ಯಕತೆ ಇಲ್ಲ ಪ್ರತಿ ಎಕರೆಗೆ 50,000 ಪರಿಹಾರ ಕೊಡುವಂತೆ ಆಗ್ರಹ

**ದೇವರಹಿಪ್ಪರಗಿ :** ಕಳೆದ ಐದು ತಿಂಗಳಿಂದವಿಜಯಪುರಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಪ್ರತಿ ತಾಲೂಕಿನಲ್ಲಿ ಸುರಿಯುತ್ತಿರುವ ವಿಪರೀತ ಮಳೆಯಿಂದಾಗಿ ಎಲ್ಲ ಬೆಳೆಗಳು ಸಂಪೂರ್ಣ ನೀರಲ್ಲಿ ನಿಂತು ಹಾಳಾಗಿವೆ . ಜಂಟಿ ಸಮೀಕ್ಷೆ ನೆಪದಲ್ಲಿ ಯಾವುದೇ ಸಮಯವನ್ನು ಹಾಳು ಮಾಡದೆ ತಾಲೂಕಿನ ಪ್ರತಿಯೊಂದು ಗ್ರಾಮದ ಪ್ರತಿಯೊಬ್ಬ ರೈತರಿಗೂ ಒಣ ಬೇಸಾಯಕ್ಕೆ 50,000 ಹಾಗೂ ನೀರಾವರಿ ಭೂಮಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡಬೇಕೆಂದು ಈ ಮೂಲಕ ಜಿಲ್ಲಾಡಳಿತಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ ಎಂದು ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅಗ್ರಹ ಮಾಡಿದರು

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ದೇವರ ಹಿಪ್ಪರಗಿ ತಾಲೂಕು ದಂಡಧಿಕಾರಿಗಳಾದ ಪ್ರಕಾಶ



ಸಿಂದಗಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ವಿಪರೀತ ಮಳೆಯಿಂದಾಗಿ ತಾಲೂಕಿನ ಕೃಷಿ ಬೆಳೆಗಳಾದ ತೊಗರಿ ಹತ್ತಿ ಮೆಕ್ಕೆಜೋಳ ಸಜ್ಜಿ ಸೇರಿದಂತೆ ಸಮಸ್ತ ಬೆಳೆಗಳು ಹಾಳಾಗಿವೆ ದ್ರಾಕ್ಷಿ ದಾಳಿಂಬ್ರಿ ಲಿಂಬೆ, ಬಾಳೆ ಸೇರಿದಂತೆ ಎಲ್ಲ ಬೆಳೆಗಳಲ್ಲಿ ನೀರು ನಿಂತು ಹಾಳಾಗಿವೆ ಆದ್ದ-ರಿಂದ ಯಾವುದೇ ಜಂಟಿ ಸಮೀಕ್ಷೆ ವೈಮಾನಿಕ ಸಮೀಕ್ಷೆ ಎಂದು ನೆಪ ಹೇಳದೆ 15 ದಿನದ ಒಳಗಾಗಿ ಜಿಲ್ಲೆಯ ಎಲ್ಲರಿಗೂ ಪರಿಹಾರ ಬರಲೇಬೇಕೆಂದು ಒತ್ತಾಯ ಮಾಡಲಾಯಿತು

ತಾಲೂಕ ಅಧ್ಯಕ್ಷರಾದ ಈರಪ್ಪ ಕುಳೆಕುಮಟಗಿ ಅವರು ಮಾತ್ನಾಡುತ್ತಾ ಭೀಮೆ, ಕೃಷ್ಣಾ ಹಾಗೂ ದೋಣಿಯ ಪ್ರವಾಹದಿಂದಾಗಿ ಸಾಕಷ್ಟು ರೈತರ ಕೃಷಿ ಭೂಮಿಗಳ ಬೆಳೆಗಳು ಹಾಳಾಗಿರುವ ಜೊತೆಗೆ ಮನೆ ಮಠಗಳು ಕೂಡ ಬಿದ್ದಿರುವ ಉದಾಹರಣೆಗಳಿವೆ ಜೊತೆಗೆ ಹಲವಾರು ಪ್ರಾಣಿಗಳು ಕೂಡ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ ಇದಕೆಲ್ಲ ಪರಿಹಾರ ನೀಡಬೇಕೆಂದು ಆಗ್ರಹ ಮಾಡುತ್ತಿದ್ದೇವೆ ಒಂದು ವೇಳೆ ತಡವಾದರೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಹಿರಿಯರಾದ ಬಸಗೊಂಡಪ್ಪ ಉಮ್ರಾಣಿಅವರುಮಾತನಾಡುತ್ತಾ ದೇವರ ಹಿಪ್ಪರಗಿ ತಾಲೂಕಿನ ಎಲ್ಲಾ ರೈತರ ಜಮೀನಿನ ಸಮಸ್ತ ಬೆಳೆಗಳು ಕೂಡ ನಷ್ಟಗೊಂಡಿರುವ ಹಿನ್ನೆಲೆಯಲ್ಲಿ ಯಾರಿಗೂ ತಾರತಮ್ಯ ಮಾಡದೆ ಎಲ್ಲ-ರಿಗೂ ನಷ್ಟ ಪರಿಹಾರವನ್ನು ಹಾಕಬೇಕು ಅದೇ ರೀತಿಯಾಗಿ ಫಸಲು ಭೀಮಾ ಯೋಜನೆಯ ವಿಮೇವೂ ಕೂಡ ಆದಷ್ಟು ಬೇಗನೆ ಕೊಡಬೇಕೆಂದರು

ವೇಳೆ ಜಿಲ್ಲಾ ಕಾರ್ಯಾಧ್ಯಕ್ಷರಾದ ಪ್ರಕಾಶ ತೇಲಿ, ದೇವರಹಿಪರಗಿ ತಾಲೂಕ ಗೌರವಾಧ್ಯಕ್ಷರಾದ ಶಿವಾನಂದಯ ಹಿರೇಮಠ ಮಹಿಳಾ ಘಟಕದ ಅಧ್ಯಕ್ಷರಾದ ಗಿರಿಜಾ ಮೈತ್ರಿ, ಸುನಂದ ಸೊನ್ನಳ್ಳಿ, ಅಂಬವ್ವ ಬಿರಾದಾರ, ಎಂ ಡಿ ಮನಹಳ್ಳಿ, ರಮೇಶ್ ಚಾಂದಕವಟಗಿ, ಸಂಗಪ್ಪಗೌಡ ಬಿರಾದಾರ, ಶಿವಪ್ಪ ತಾಳಿಕೋಟಿ, ಮಹಾಂತಪ್ಪ ಸುಂಬಡ, ಕಾಶೀನಾಥ ಬಿರಾದಾರ್ ಪುಜಪ್ಪ ಗುಡ್ಡಳ್ಳಿ, ಅಶೋಕ್ ಬಿರಾದಾರ, ಸಿದ್ದಪ್ಪ ಪೂಜಾರಿ, ಶಿವಶಂಕರ ಬಿರಾದಾರ,

ಶಿಖಂದರ್ ತೋನಶ್ಯಾಳ, ಬಸಗೊಂಡ ಉಮ್ರಾಣಿ, ಸೇ-ರಿದಂತೆ ನೂರಾರು, ರೈತರು ಇದ್ದರು.

# ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯವಾದಿ ಜಯಪ್ರಕಾಶ್ ನಾರಾಯಣ್



**ಕಲಬುರಗಿ :** 'ಜೆಪಿ' ಎಂದು ಪ್ರಸಿದ್ಧಿ ಹೊಂದಿರುವ ಜಯಪ್ರಕಾಶ್ ನಾರಾಯಣ್ ಭಾರತದ ಒಬ್ಬ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯವಾದಿ, ಸಮಾಜವಾದಿನಾಯಕ.ಸಂಪೂರ್ಣಕ್ರಾಂತಿ"ಯನ್ನು ಮುನ್ನೆಡಿಸಿದವರು. ಗಾಂಧಿ ಮತ್ತು ಎಂ.ಎನ್.ರಾಯ್ ರ ವಿಚಾರಗಳಿಂದ ಪ್ರಭಾವಿತರಾಗಿದ್ದರು ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು.

ನಗರದ ಆಳಂದ ರಸ್ತೆಯ ಜೆ.ಆರ್ ನಗರದಲ್ಲಿನ 'ಸಕ್ಸಸ್ ಕಂಪ್ಯೂಟರ್ ತರಬೇತಿ ಸಂಸ್ಥೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ ಜಯಪ್ರಕಾಶ್ ನಾರಾಯಣ್ ರ 123ನೇ ಜನ್ಮದಿನಾಚರಣೆ'ಯಕಾರ್ಯಕ್ರಮದಲ್ಲಿಪುಷ್ಪಾರ್ಚನೆ ಮಾಡಿ ಅವರು ಮಾತನಾಡುತ್ತಿದ್ದರು.

ಭಾರತ ರತ್ನ" ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ರಾಷ್ಟ್ರೀಯವಾದಿ ಮತ್ತು ಲೇಖಕ ರಾಮವೃಕ್ಷ ಬೇನಿಪುರಿ

ಅವರು ತಮ್ಮ ಜೀವನಚರಿತ್ರೆಯನ್ನು ಬರೆದಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. 1970ರ ದಶಕದಲ್ಲಿ "ಸಂಪೂರ್ಣ ಕ್ರಾಂತಿ"ಯನ್ನು ಮುನ್ನಡೆಸಿದರು.

ಅಹಿಂಸಾತ್ಮಕ ಪ್ರತಿಭಟನೆ ಮತ್ತು ಜನಸಂಘಟನೆಯ ಮೂಲಕ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು.

ಭೂದಾನ ಯಜ್ಞ' ಚಳುವಳಿಯ ಹರಿಕಾರರಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಶಿಕ್ಷಕಿಯರಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್, ಸ್ನೇಹಾ ಚೌಹಾಣ ಹಾಗೂ ವಿದ್ಯಾರ್ಥಿಗಳು ಇದ್ದರು.

# ಶಾಸಕ ವಜ್ಜಲ್‌ರಿಂದ ಸರ್ಕಾರಿ ಶಾಲೆಯ ಶಿಥಿಲ ಕೊಠಡಿಗಳ ಪರಿಶೀಲನೆ

**ಲಿಂಗಸುಗೂರು :** ತಾಲೂಕಿನ ಗ್ರಾಮದಲ್ಲಿ ಶಿಥಿಲಾವಸ್ಥೆ ತಲುಪಿರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಅಪಾಯದ ಹಂಚಿನಲ್ಲಿರುವ ಶಾಲಾ ಕೊಠಡಿ ಗಳನ್ನು ಪರಿಶೀಲನೆ ನಡೆಸಿದ ಶಾಸಕ ಮಾನಪ್ಪ ವಜ್ಜಲ್ ರು.

ಈಚನಾಳ ಗ್ರಾಮದ ಸರ್ಕಾರಿ ಶಾಲೆಯಸುಮಾರು60ವರ್ಷಗಳ ಹಿಂದೆ ನಿರ್ಮಾಣವಾಗಿದ್ದು ಕಳೆದ ಕೆಲವು ವರ್ಷಗಳಿಂದ ಶಿಥಿಲಾವಸ್ಥೆ ತಲುಪಿದ್ದುಒಟ್ಟು13ಕೊಠಡಿಗಳಲ್ಲಿ ಹತ್ತು ಕೊಠಡಿಗಳು ಸಂಪೂರ್ಣ ಅಪಾಯದ ಅಂಚಿನಲ್ಲಿದ್ದು 260ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಾಲೆಯ ಶಿಕ್ಷಕರು ಜೀವ ಭಯದಲ್ಲಿಯೇ ಮಕ್ಕಳಿಗೆ ಶಿಕ್ಷಣ ನೀಡಬೇಕಾದ ಅನಿವಾರ್ಯತೆ ಬಂದಾಗಿದೆ .



ಪ್ರಸಕ್ತ 2025 ನೇ ಸಾಲಿನಲ್ಲಿ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ರಾಯಚೂರು ಇವರ ಮೌಖಿಕ ಆದೇಶದ ಮೇರೆಗೆ ಜೂನ್ 30 ರಿಂದ ಶೈಕ್ಷಣಿಕ ಚಟುವಟಿಕೆಗಳೆ ಯೋಗ್ಯ ವಿರುವ ಮೂರು ಕೊಠಡಿಗಳಲ್ಲಿ ಒಂದರಿಂದ ನಾಲ್ಕನೇ ತರಗತಿ ವಿದ್ಯಾರ್ಥಿಗಳು ಬೆಳಗ್ಗೆ ಹಾಗೂ ಐದರಿಂದ ಎಂಟು ನೇ ತರಗತಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ನಂತರ ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ನಡೆಸಲು ಸೂಚಿಸಲಾಗಿತ್ತು ಈ ಕು-ರಿತು ಶಾಸಕ ಮಾನಪ್ಪ ವಜ್ಜಲ್ ಗಮನಕ್ಕೆ ಬರುತ್ತಿದ್ದಂತೆ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ತ್ವರಿತ ಗತಿಯಲ್ಲಿ ಕೊಠಡಿಗಳನ್ನು ತೆರವುಗೊಳಿಸಿ ತಾತ್ಕಾಲಿಕವಾಗಿ ಮಕ್ಕಳ ಶೈಕ್ಷಣಿಕ ಚಟುವಟಿ-ಕೆಗಳನ್ನು ನಡೆಸುವಂತೆ ನಿರ್ದಶನ ನೀಡಿ ಕಟ್ಟಡಗಳನ್ನು ಕೂಡಲೇ ಮಂಜೂರು ಮಾಡಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೂನೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಗಂಗಮ್ಮ ಚೌವ್ಹಾಣ್ ಪಿಡಿಒ ಬಸಯ್ಯಸ್ವಾಮಿ ಗ್ರಾಮದ ಹಿರಿಯ ಮುಖಂಡರಾದ ಶರಣಪ್ಪ ಮೇಟಿ ಮುದುಕಪ್ಪ ಗೌಡ ಮೂಲಿಮನಿ ಪೀರ್ ಸಾಬ್ ಪಂಚಮಬಸನಗೌಡ ಮೇಟಿ ಅಮರೇಶ .ಜಿ .ಪೂಜಾರಿ ಎಸ್ ಡಿ ಎಂ ಸಿ ಅಧ್ಯಕ್ಷ ಶರಣಪ್ಪ ಕುಂಬಾರ್ ರಮೇಶ ಗಾಳಿಪೂಜಿ ಸಣ್ಣಗದ್ಯಪ್ಪ ಹಳ್ಳಿ ಅಮರೇಶ ಬಡಿಗೇರ್ ಆನಂದ ಕುಂಬಾರ್ ದೇವರೆಡ್ಡಿ ಮೇಟಿ ಅಮರೇಶಗಾಳಿಪೂಜಿ ಯಂಕಣ್ಣ ಗಡ್ಡಿಸಹದೇವಪ್ಪ ಕರಡಿ ಅಮರೇಶ ಕಟ್ಟಿಮನಿ ಆದಪ್ಪ ಕುಂಬಾರ್ ಸೇರಿದಂತೆ ಬಿಜೆಪಿ ಪಕ್ಷದ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

**ವರದಿ. ಚಂದ್ರೇಗೌಡ ಹೊನ್ನಳ್ಳಿ.**

# ಎಚ್ ಕೆ ಇ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶಿಕ್ಷಕರಿಗಾಗಿ ಐದು ದಿನಗಳ ಎಫ್ ಡಿ ಪಿ ಕಾರ್ಯಕ್ರಮ

**ಕಲಬುರ್ಗಿ:**ಹೈದರಾಬಾದ್‌ಕರ್ನಾಟಕ ಶಿಕ್ಷಣ ಸಂಸ್ಥೆಯ ಕ್ವಾಲಿಟಿ ಅಶ್ಯೂರೆನ್ಸ ಸೆಲ್ ಸಹಯೋಗದೊಂದಿಗೆ ಸಂಸ್ಥೆಯ ಶಿಕ್ಷಕರಿಗಾಗಿ ಗಣಕಯಂತ್ರ ಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ಕುರಿತಾಗಿ ಐದು ದಿನಗಳ ಕಾಲ ಫ್ಯಾಕಲ್ಟಿ ಡೆವಲಪ್ಮೆಂಟ್ ಪೊರೀಗ್ರಾಂ ಸಂಸ್ಥೆಯ ಪಾಲಿಟೆಕ್ನಿಕ್ ಕಾಲೇಜು ಹಾಗೂ ಎಂ ಎಸ್ ಇರಾಣಿ



ಪದವಿ ಮಹಾವಿದ್ಯಾಲಯದ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಂಚಾಲಕರಾದ ನಾಗಣ್ಣ ಘಂಟಿ ಮಾತನಾಡಿ ಇಂದಿನ ದಿನಗಳಲ್ಲಿ ಪ್ರತಿಯೊಬ್ಬ ಸಿಬ್ಬಂದಿಗೆ ಕಂಪ್ಯೂಟರ್ ಜ್ಞಾನ ಕೃತಕ ಬುದ್ಧಿಮತ್ತೆ ಅವಶ್ಯಕತೆ ಇದೆ ಎಂದು ಹೇಳಿದರು. ಆಡಳಿತ ಮಂಡಳಿ ಸದಸ್ಯರಾದ ಅನಿಲಕುಮಾರ ಮರಗೋಳ, ಎಂ ಎಸ್ ಇರಾಣಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯಮಲ್ಲಪ್ಪ ಬೋತಗಿ, ಕ್ವಾಲಿಟಿ ಅಶ್ಯೂರೆನ್ಸ ಸೆಲ್ ಮುಖ್ಯಸ್ಥೆ ಡಾ ಉಮಾ ರೇವೂರ, ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾದ ಶರಣಬಸಪ್ಪ ಗಲಗಲಿ,ಉಪ ಪ್ರಾಚಾರ್ಯರಾದ ಸಂಗಮೇಶ ನೀಲಾ ವೇದಿಕೆಯ ಮೇಲೆ ಉಪಸ್ಥಿತರಿದ್ದರು.ಕಾರ್ಯಕ್ರಮದ ಸಂಯೋಜಕರಾದ ಡಾ ಮೈತ್ರಾದೇವಿ ಹಳೆಮನಿ ಕಾರ್ಯಕ್ರಮ ನಿರೂಪಿಸಿದರು,ರಾಜಶ್ರೀ ಎಂ ಬಿ ವಂದಿಸಿದರು

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State